ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 31-12-1995.

# *ವಜ್ರತುಲ್ಯ ವರ್ಷದಲ್ಲಿ ಫರಿಶ್ತೆಯಾಗಿ ಬಾಪ್‌ದಾದಾರವರ ಛತ್ರಛಾಯೆ ಹಾಗೂ ಪ್ರೀತಿಯ ಅನುಭವ ಮಾಡಿಕೊಳ್ಳಿರಿ.*

(डायमण्ड वर्ष में फरिश्ता बनकर बापदादा की छत्रछाया और प्यार की अनुभूति करो)

ಇಂದು ವಿಶ್ವವನ್ನು ಸತ್ಯವಾದ ಡೈಮಂಡ್ ಸಮಾನ ಉಜ್ವಲವನ್ನಾಗಿ ಮಾಡುವ, ಪ್ರಕೃತಿಯನ್ನೂ ಸಹ ಡೈಮಂಡ್ ಸಮಾನ ಕಂಗೊಳಿಸುವಂತೆ ಮಾಡುವ ವಿಶ್ವದ ಆತ್ಮರಲ್ಲಿ ನಮ್ಮ ಡೈರೆಕ್ಟ್ ಮಕ್ಕಳನ್ನು ಡೈಮಂಡ್ ನ ಸಮಾನ ತಯಾರು ಮಾಡುವ ಹಾಗೂ  ಹೊಸ ವರ್ಷದ ಜೊತೆಯಲ್ಲಿ ನವಯುಗ, ನವ ವಿಶ್ವವನ್ನು ಸ್ಥಾಪನೆ ಮಾಡುವ ತಂದೆಯು ಡೈಮಂಡ್ ಆಗುವ ಮಕ್ಕಳನ್ನು ನೋಡುತ್ತಾ ಇದ್ದಾರೆ. ಸಾಕಾರ ಸ್ವರೂಪದಲ್ಲಿಯೂ ಬಾಪ್‌ದಾದಾರವರ ಎದುರಿನಲ್ಲಿ ಎಷ್ಟು ಡೈಮಂಡ್‌ಗಳು ಹೊಳೆಯುತ್ತಾ ಇವೆ ಹಾಗೂ ವಿಶ್ವದ ಮೂಲೆ ಮೂಲೆಯಲ್ಲಿ ನಾಲ್ಕೂ ಕಡೆ ಪ್ರಕಾಶಿಸುತ್ತಿರುವ ಡೈಮಂಡ್‌ಗಳನ್ನು ನೋಡುತ್ತಾ ಇದ್ದಾರೆ. ಸರ್ವರ ಮಸ್ತಕದಲ್ಲಿ ಪ್ರಕಾಶಿಸುತ್ತಿರುವ ಆತ್ಮರೂಪೀ ಡೈಮಂಡ್ ಎಷ್ಟು ಶೋಭಿಸುತ್ತದೆ. ಎದುರಿನಲ್ಲಿ ಪ್ರಕಾಶಿಸುತ್ತಿರುವ ಆತ್ಮರೂಪೀ ಡೈಮಂಡ್ ಹಾಗೂ ಇಷ್ಟೊಂದು ಸಂಘಟಿತ ರೂಪದಲ್ಲಿ ನಾಲ್ಕೂ ಕಡೆ ಡೈಮಂಡೇ ಡೈಮಂಡ್ ನೋಡುಲು ದೃಶ್ಯವು ಎಷ್ಟು ಪ್ರಿಯವೆನಿಸುತ್ತದೆ ಹೀಗೆ ಈ ಸಂಘಟನೆಯು ಯಾರದಾಗಿದೆ? ವಜ್ರಗಳ ಸಂಘಟನೆ. ನಂಬರ್‌ವಾರ್ ಆಗಿರಬಹುದು, ಆದರೂ ಸಹ ಪ್ರಕಾಶಿಸುತ್ತಾ ಇದ್ದಾರೆ. ಪ್ರಕಾಶಿಸುತ್ತಿರುವ ವಜ್ರಗಳ ಸಭೆಯು ತಂದೆಯ ಎದುರಿಗೆ ಇದೆ. ನೀವೂ ಸಹ ಏನು ನೋಡುತ್ತಾ ಇದ್ದೀರಿ? ಡೈಮಂಡ್ ನೋಡುತ್ತಾ ಇದ್ದೀರಲ್ಲವೇ? ಅಥವಾ ಶರೀರವನ್ನು ನೋಡುತ್ತಾ ಇದ್ದೀರೋ' 63 ಜನ್ಮಗಳೂ ಶರೀರವನೇ ನೋಡಿದಿರಿ, ಆದರೆ ಈಗ ಶರೀರದಲ್ಲಿ ಪ್ರಕಾಶಿಸುತ್ತಿರುವ ಡೈಮಂಡ್ ಗೋಚರವಾಗುತ್ತದೆಯೇ? ಅಥವಾ ಅಡಗಿಕೊಂಡಿದೆಯೋ? ಅಥವಾ ಒಮ್ಮೊಮ್ಮೆ ಕಂಡು ಒಮ್ಮೊಮ್ಮೆ ಅಡಗಿಕೊಂಡುಬಿಡುತ್ತದೆಯೇ?

ಇದು ಡೈಮೆಂಡ್ ಜೂಬ್ಲಿಯಾಗಿದೆ. ಜೂಬ್ಲಿಯಲ್ಲಿ ಏನು ಇರುತ್ತದೆ? ಜೂಬ್ಲಿಯಲ್ಲಿ ಏನು ಅಲಂಕಾರ ಮಾಡುತ್ತಾರೆ? ಈಗಿನ ಸಮಯದಲ್ಲಿ ವೆರೈಟಿ (ವಿಧ ವಿಧವಾದ) ಲೈಟ್‌ಗಳ ಅಲಂಕಾರವು ಹೆಚ್ಚಾಗಿ ಇರುತ್ತದೆ. ನೀವೂ ಸಹ ವೃಕ್ಷದಲ್ಲಿ ಅಲ್ಲಲ್ಲಿ ಲೈಟ್‌ಗಳನ್ನು ಸಜ್ಜುಗೊಳಿಸುತ್ತೀರಲ್ಲವೇ? ಹಾಗೆ ಡೈಮಂಡ್ ಜೂಬ್ಲಿ ಆಚರಣೆ ಮಾಡುವುದಂತೂ ಒಂದು ದಿನದ ಸಲುವಾಗಿ ಜೂಬ್ಲಿ ಆಚರಣೆ ಮಾಡುತ್ತೀರಿ ಅಥವಾ ಕ್ರಿಸ್‌ಮಸ್ ಆಚರಣೆ ಮಾಡುತ್ತೀರಿ ಅಥವಾ ಯಾವುದಾದರೂ ಉತ್ಸವ ಆಚರಣೆ ಮಾಡುತ್ತೀರಿ ಆದರೆ ನೀವು ಯಾವ ಉತ್ಸವವನ್ನು ಆಚರಣೆ ಮಾಡುತ್ತಿದ್ದೀರಿ? ಡೈಮಂಡ್ ದಿವಸವೆಂದು ಹೇಳುತ್ತೀರೋ ಅಥವಾ ಡೈಮಂಡ್ ವರ್ಷವೆಂದು ಹೇಳುತ್ತೀರೋ? ಏನು ಆಚರಣೆ ಮಾಡುತ್ತಿದ್ದೀರಿ? (ಡೈಮಂಡ್ ವರ್ಷ), ಡೈಮಂಡ್ ವರ್ಷವನ್ನು ಆಚರಣೆ ಮಾಡುತ್ತಿದ್ದೀರಾ? ಇದು ಪಕ್ಕಾ ಆಗಿದೆಯೇ? ಒಂದುವೇಳೆ ಇದೇ ಎಲ್ಲರ ದೃಢ ಸಂಕಲ್ಪವಾಗಿದ್ದರೆ,

ಡೈಮಂಡ್ ಜೂಬ್ಲಿ ವರ್ಷವನ್ನು ಮಾಡುತ್ತಿದ್ದೇವೆಂಬುದು ಪಕ್ಕಾ ಆಗಿದ್ದರೆ, ನಿಮ್ಮ ಬಾಯಿಯಲ್ಲಿ ಗುಲಾಬ್ ಜಾಮೂನ್ ಆದ್ದರಿಂದ ಆನಂದೋತ್ಸವ ಆಚರಣೆ ಮಾಡುವುದೆಂದರೆ ಏನು? ತಯಾರಾಗುವುದು ಹಾಗಾದರೆ ಇಡೀ ವರ್ಷವೂ ಡೈಮಂಡ್ ಆಗುವಿರಾ ಅಥವಾ ಸ್ವಲ್ಪ ಸ್ವಲ್ಪ ಕಲೆಯು ಹತ್ತುವುದೋ? ಬಾಪ್‌ದಾದಾರವರಂತೂ ಮಕ್ಕಳ ಉತ್ಸಾಹ-ಉಲ್ಲಾಸವನ್ನು ನೋಡಿ ಪದಮದಷ್ಟು ಡಬಲ್ ಶುಭಾಶಯಗಳನ್ನು ಕೊಡುತ್ತಾರೆ. ಈದಿನ ಡಬಲ್ ಆಗಿದೆಯಲ್ಲವೇ.. ಒಂದು ಹೊಸ ವರ್ಷ ಹಾಗೂ ಇನ್ನೊಂದು ಡೈಮಂಡ್ ಜೂಬ್ಲಿ  ಎರಡರ ಸಂಘಟನೆಯಾಗಿದೆ. ಹೀಗೆ ಡೈಮಂಡ್ ವರ್ಷದಲ್ಲಿ ಬಾಪ್‌ದಾದಾರವರು ಏನು ವಿಶೇಷತೆಯನ್ನು ನೋಡಲು ಬಯಸುತ್ತಾರೆಂದರೆ, ಮಕ್ಕಳು ಪ್ರತಿಯೊಬ್ಬರೂ ಯಾವಾಗ ನೋಡಿದರೂ ಯಾರನ್ನು ನೋಡಿದರೂ ಏನು ಕಂಡುಬರಬೇಕು? ಡೈಮಂಡ್. ಪ್ರಕಾಶಿಸುತ್ತಾ ಇರುವ ಡೈಮಂಡೋ ಅಥವಾ ಮಣ್ಣಿನೊಳಗಿರುವ ಡೈಮಂಡೋ? ಪ್ರಕಾಶಿಸುತ್ತಿರುವ ಡೈಮಂಡ್. ಒಳ್ಳೆಯದು. ಹಾಗಾದರೆ ಇಡೀ ವರ್ಷದ ಸಲುವಾಗಿ ಇಂತಹ ಡೈಮಂಡ್ ಆಗಿಬಿಟ್ಟಿದ್ದೀರಾ? ಏಕೆಂದರೆ ಸಂಕಲ್ಪವನ್ನಂತೂ ಈದಿನ ಮಾಡಬೇಕಲ್ಲವೇ. ಮಾಡಿಬಿಟ್ಟಿದ್ದೀರಾ? ಆಗುವುದೂ ಡೈಮಂಡ್ ಆಗಿ,  ಡೈಮಂಡನ್ನೇ ನೋಡುವೆನು. ಒಂದುವೇಳೆ ಅನ್ಯ ಆತ್ಮರು ಕಪ್ಪು ಕಲ್ಲಿದ್ದಲಾಗಿದ್ದರೂ, ಪೂರ್ತಿ ತಮೋಗುಣವುಳ್ಳ ಆತ್ಮನಾಗಿದ್ದರೂ ನೀವು ಏನು ನೋಡುವಿರಿ? ಕಲ್ಲಿದ್ದಲನ್ನು ನೋಡುವಿರೋ ಅಥವಾ ಡೈಮಂಡನ್ನು ನೋಡುವಿರೋ? ಡೈಮಂಡ್ ನೋಡುವಿರಾ? ಒಳ್ಳೆಯದು. ನಿಮ್ಮ ದೃಷ್ಟಿಯು ಬೀಳುವುದರಿಂದ ಅವರ (ತಮೋಗುಣವು) ಕಪ್ಪು ಕಡಿಮೆಯಾಗುತ್ತಾ ಹೋಗುವುದು ಹೀಗೆ ಡೈಮಂಡ್ ಜೂಬ್ಲಿಯಲ್ಲಿ ಇದೇ ಸೇವೆ ಮಾಡಬೇಕಲ್ಲವೇ? ಅಮೃತವೇಳೆಯಿಂದ ರಾತ್ರಿಯವರೆಗೆ ಎಷ್ಟು ಆತ್ಮರ ಸಂಬಂಧ-ಸಂಪರ್ಕದಲ್ಲಿ ಬಂದರೂ ಡೈಮಂಡ್ ಆಗಿ ಡೈಮಂಡನ್ನು ನೋಡಿರಿ. ಇದನ್ನು ಪಕ್ಕಾ ಮಾಡಿಕೊಂಡಿದ್ದೀರಾ? ಅಥವಾ ಡೈಮಂಡ್ ಜೂಬ್ಲಿ ಆಚರಣೆ ಮಾಡುತ್ತೇವೆಂದು ಪ್ರತಿಯೊಂದು ಸ್ಥಳದಲ್ಲಿ ಕೇವಲ ಎರಡು ಮೂರು ಸಮಾರಂಭ ಮಾಡಿಬಿಟ್ಟು ಡೈಮಂಡ್ ಜೂಬ್ಲಿ ಆಗಿಹೋಯಿತೆಂದು ಹೇಳುವಿರೋ. ಅದು ಸರಿಯಲ್ಲ ಫಂಕ್ಷನ್ ಮಾಡಿರಿ ಆಮಂತ್ರಣ ನೀಡಿರಿ, ಎಚ್ಚರಗೊಳಿಸಿರಿ, ಇದನ್ನಂತೂ ಮಾಡಲೇಬೇಕು ಹಾಗೂ ಮಾಡುತ್ತಲೂ ಇದ್ದೀರಿ. ಆದರೆ ಕೇವಲ ಫಂಕ್ಷನ್ ಮಾಡುವುದಲ್ಲ. ಈ ಡೈಮಂಡ್ ಜೂಬ್ಲಿಯಲ್ಲಿ ಪ್ರತಿದಿನದ ಫಂಕ್ಷನ್ ಡೈಮಂಡ್ ಆಗಿರಿ, ಡೈಮಂಡನ್ನು ನೋಡಿರಿ, ಡೈಮಂಡನ್ನಾಗಿ ತಯಾರು ಮಾಡಿರಿ. ಇದು ಪ್ರತಿದಿನದ ಫಂಕ್ಷನ್ ಆಗಿದೆ. ಆದ್ದರಿಂದ ಪ್ರತಿದಿನವೂ ಫಂಕ್ಷನ್ ಮಾಡುವಿರೋ ಅಥವಾ ಮೂರು ನಾಲ್ಕು ದಿನ ಅಥವಾ ಒಂದು ವಾರ ಮಾಡುವಿರೋ?.

ಈ ವರ್ಷದಲ್ಲಿ ಬಾಪ್‌ದಾದಾರವರದು ವಿಶೇಷವಾಗಿ ಎಲ್ಲಾ ಮಕ್ಕಳ ಬಗ್ಗೆ ಏನು ಶುಭ ಆಸೆಯಿದೆಯೆಂದರೆ ಅಥವಾ ಶ್ರೀಮತವೆಂದಾದರೂ ಕರೆಯಿರಿ ಡೈಮಂಡ್‌ನ ಹೊರತು ಬೇರೆ ಏನೂ ಆಗಬೇಡಿರಿ. ಏನೇ ಆಗಿಬಿಟ್ಟರೂ ಡೈಮಂಡ್ ನಲ್ಲಿ ದೋಷ ಅಥವಾ ಕಲೆಯಿರಬಾರದು. ಒಂದು ವೇಳೆ ಯಾವುದಾದರೂ ವಿಘ್ನ ಅಥವಾ ಸ್ವಭಾವ-ಸಂಸ್ಕಾರದ ವಶವಾಗಿ ಬಿಟ್ಟರೆ ಕಲೆ ಅಥವಾ ದೋಷವು ಹತ್ತಿಬಿಡುತ್ತದೆ. ವಿಘ್ನಗಳಂತೂ ಬರುತ್ತವೆಯಲ್ಲವೇ? ವಿಘ್ನಗಳು ಬರಬೇಕಲ್ಲವೇ? ವಿಘ್ನಗಳು ಬರಬೇಕೋ ಅಥವಾ ಬೇಡವೋ? ವಿಘ್ನವಿನಾಶಕ ಎನ್ನುವ ಟೈಟಲ್ ಇರುವುದರಿಂದ ವಿಘ್ನಗಳು ಬಂದರೆ ತಾನೆ ವಿನಾಶ ಮಾಡುವುದು. ಒಂದುವೇಳೆ ಯಾರಾದರೂ ಶತ್ರು ಬರದೇ ನಾನು ವಿಜಯೀ ಎಂದು  ಹೇಳಿದರೆ, ಅವರನ್ನು ವಿಜಯಶಾಲಿಯೆಂದು ಯಾರಾದರೂ ಒಪ್ಪಿಕೊಳ್ಳುತ್ತಾರೇಯೇ? ಇಲ್ಲ ಆದ್ದರಿಂದ ವಿಘ್ನಗಳಂತೂ ಬರುವವು. ಪಕೃತಿಯ

ವಿಘ್ನವಾಗಲೀ ಅಥವಾ ಆತ್ಮರ ವಿಘ್ನವಾಗಲಿ, ಅಥವಾ ಅನೇಕ ಪ್ರಕಾರದ ಪರಿಸ್ಥಿತಿಗಳ ವಿಘ್ನವಾಗಲೀ ಬಂದರೂ ನೀವು ಡೈಮಂಡ್, ಎಂದರೆ ಎಂತಹ ಶಕ್ತಿಪೂರ್ಣರಾಗಿರೆಂದರೆ ಕಲೆ ಅಥವಾ ದೋಷದ ಪ್ರಭಾವ ಆಗಬಾರದು. ಇದು ಸಾಧ್ಯವಾಗುತ್ತದೆಯೇ?

ಈ ವಜ್ರಮಹೋತ್ಸವ ವರ್ಷವು ಮಹಾನ್ ವರ್ಷವಾಗಿದೆ. ಅವರು ವಿಶೇಷವಾದ ಮಾಸವನ್ನು ಆಚರಿಸುವಂತೆಯೇ. ಈ ವಜ್ರಮಹೋತ್ಸವ ವರ್ಷವು ಶ್ರೇಷ್ಠ ವರ್ಷವಾಗಿದೆ ಈ ವರ್ಷ. ಬಾಪ್‌ದಾದಾರವರು ಎಲ್ಲರನ್ನೂ ನಡೆಯುತ್ತಾ-ತಿರುಗಾಡುತ್ತಾ ಫರಿಶ್ತೆಯರನ್ನಾಗಿ ನೋಡಲು ಬಯಸುತ್ತಾರೆ. ಆತ್ಮವನ್ನು ನೋಡಲು ಕೇವಲ ಸವಾಕೇಂದ್ರದ ಕಲ್ಯಾಣಿಗಳಾಗಬೇಡಿ, ವಿಶ್ವಕಲ್ಯಾಣಿಗಳಾಗಿರಿ ಎಂದು ಹಲವರು ಹೇಳುತ್ತಾರೆ. ಅವರು 84 ಬಾರಿ ಪ್ರಯತ್ನಿಸುತ್ತಾರೆ. ಆದರೆ ಆತ್ಮವು ತುಂಬಾ ಚಿಕ್ಕದಾಗಿದೆ. ಆದ್ದರಿಂದ ದೇಹವು ಕಾಣಿಸುತ್ತದೆ. ಆದ್ದರಿಂದ ಬಾಪ್‌ದಾದಾ ಹೇಳುತ್ತಾರೆ. ಬಂದು ಹಾರಿಹೋಗುತ್ತದೆ ಆದರೆ ಫರಿಶ್ತಾ ರೂಪವು ಉದ್ದ ಮತ್ತು ಅಗಲವಾಗಿದೆ. ಅದು ಒಂದು ಬಿಂದುವಲ್ಲ. ಅಲ್ಲವೇ? ಫರಿಶ್ತಾ ಎಂದರೆ ಬೆಳಕಿನ ಆಕಾರ. ಆದ್ದರಿಂದ, ಫರಿಶ್ತಾ ರೂಪದಲ್ಲಿ ಸ್ಥಿತರಾಗಿ ಪ್ರತಿಯೊಂದು ಕರ್ಮವನ್ನು ಮಾಡಿ. ನೀವು ಫರಿಶ್ತಾ ರೂಪದಲ್ಲಿ ಕರ್ಮವನ್ನು ಮಾಡಲು ಸಾಧ್ಯವಿಲ್ಲ ಎಂದು ಅಲ್ಲ. ಮಾಡಬಹುದೇ ಅಥವಾ ನಿಮಗೆ ಸಾಕಾರ ಶರೀರವು ಬೇಕೇ? ಏಕೆಂದರೆ ಸಾಕಾರ ಶರೀರದೊಂದಿಗೆ ಅನೇಕ ಜನ್ಮಗಳಿಂದ ಪ್ರೀತಿ ಇದೆ. ಮರೆಯಲು ಬಯಸಿದರೂ ಮರೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ತಂದೆಯು ಹೇಳುವುದೇನೆಂದರೆ ಆದ್ದರಿಂದ ಒಳ್ಳೆಯದು ನಿಮಗೆ ಶರೀರವನ್ನೇ ನೋಡುವ ಅಭ್ಯಾಸವಾಗಿಬಿಟ್ಟಿರುವುದರಿಂದ. ಅದಕ್ಕೇನೂ ಅಡ್ಡಿಯಿಲ್ಲ. ಈಗ ಪ್ರಕಾಶದ ಶರೀರವನ್ನು ನೋಡಿರಿ. ಶರೀರವು ಬೇಕೆಂದರೆ ಫರಿಶ್ತೆಯೂ ಸಹ ಶರೀರಧಾರಿಯಾಗಿದ್ದಾರೆ. ಹಾಗೂ ನೀವೆಲ್ಲರೂ ಹೇಳುತ್ತೀರಿ ಶಿವಬಾಬಾರವರು ಮತ್ತು ಬ್ರಹ್ಮಾ ಬಾಬಾರವರೊಂದಿಗೆ ಬಹಳ ಪ್ರೀತಿಯಿದೆ. ಪ್ರೀತಿಯ ಅರ್ಥವಾಗಿದೆ ಸಮಾನರಾಗುವುದು. ಹೇಗೆ ಬ್ರಹ್ಮಾಬಾಬಾರವರು ಫರಿಶ್ತಾ ರೂಪದಲ್ಲಿದ್ದಾರೆಯೋ ಹಾಗೆಯೇ ಬ್ರಹ್ಮಾತಂದೆಯ ಸಮಾನ ಫರಿಶ್ತಾ ಸ್ವರೂಪದಲ್ಲಿ ಸ್ಥಿತರಾಗಿ ಪ್ರತಿಯೊಂದು ಕರ್ಮವನ್ನು ಮಾಡಿರಿ. ಏಕೆಂದರೆ ಯಾವಾಗ ವಜ್ರಮಹೋತ್ಸವನ್ನು ಆಚರಿಸುತ್ತೀದ್ದಿರಿ. ಸ್ಥಾಪನೆಯ 60 ವರ್ಷ ಸಂಪನ್ನವಾಗಿ, ವಿಶೇಷ ಸ್ಥಾಪನೆಯ ನಿಮಿತ್ತ ಶಿವತಂದೆಯಿದ್ದಾರೆ ಆದರೆ ನಿಮಿತ್ತ ಬ್ರಹ್ಮಾಬಾಬಾ ಆದರು. ನೀವು ತಮ್ಮನ್ನು ಶಿವಕುಮಾರ ಶಿವ ಕುಮಾರಿಯರೆಂದು ಹೇಳಿಕೊಳ್ಳುವುದಿಲ್ಲ. ಬ್ರಹ್ಮಾಕುಮಾರ - ಬ್ರಹ್ಮಾಕುಮಾರಿ. ಹೀಗೆ ಬ್ರಹ್ಮಾಬಾಬಾರ ಸ್ಥಾಪನೆಯ ಕಾರ್ಯದ ಜೂಬ್ಲಿಯನ್ನು ಆಚರಣೆ ಮಾಡುತ್ತಿದ್ದೀರಿ. ಆದ್ದರಿಂದ ಯಾರ ಜೂಬ್ಲಿಯನ್ನು ಆಚರಣೆ ಮಾಡಲಾಗುತ್ತದೆಯೋ ಅವರಿಗೆ ಏನು ಕೊಡಲ್ಪಡುತ್ತದೆ? (ಗಿಫ್ಟ್) ಹಾಗಾದರೆ ನೀವೆಲ್ಲರೂ ಗಿಫ್ಟ್ ಕೊಡುತ್ತೀರೋ? ಅಥವಾ ಈ ಗುಲಾಬಿಯ ಹೂವನ್ನು ತೆಗೆದುಕೊಂಡು ಬಂದು ಕೊಡುತ್ತೀರೋ, ಹೇಗೂ ಗಿಫ್ಟ್ ಕೊಟ್ಟಿದ್ದಾಯಿತು ಎಂದು ಹೇಳುತ್ತೀರೋ, ಒಬ್ಬೊಬ್ಬರು ಆನೆಯನ್ನು ತೆಗೆದುಕೊಂಡು ಬರುತ್ತಾರೆ. ಒಬ್ಬೊಬ್ಬರು ಕುದುರೆಯನ್ನು ತೆಗೆದುಕೊಂಡು ಬರುತ್ತಾರೆ. ಈ ಗಿಫ್ಟ್ (ಉಡುಗೊರೆ) ಅಂತೂ ಮನೋರಂಜನೆ ಆಗಿದೆ. ಈ ಮನೋರಂಜನೆಯೂ ಒಳ್ಳೆಯದಾಗಿದೆ ಎಲ್ಲರೂ ನೋಡಿ ಖುಷಿಯಾಗುತ್ತಾರೆ. ಈ ದಿನ ಕುದುರೆಯು ನರ್ತನೆ ಮಾಡುತ್ತಿದೆ, ಈ ದಿನ ಮನುಷ್ಯರು ಯಾರೋ ನೃತ್ಯ ಮಾಡುತ್ತಿದ್ದಾರೆ. ಹೀಗೆ ಆಟದ ವಸ್ತುಗಳನ್ನು ನೋಡಿ ಖುಷಿಯಾಗುತ್ತಾರೆ. ವಸ್ತುಗಳನ್ನು ತೆಗೆದುಕೊಂಡು ಬರಲು ಅಡ್ಡಿಯಿಲ್ಲ ಆದರೆ

ಬ್ರಹ್ಮಾಬಾಬಾರವರ ಮನಸ್ಸಿಗೆ ಇಷ್ಟವಾಗುವ ಗಿಫ್ಟ್ ಏನು ಕೊಡುವಿರಿ? ನೋಡಿರಿ, ಯಾರಿಗಾದರೂ ಉಡುಗೊರೆ ಕೊಡಬೇಕಾದರೆ ಅವರಿಗೆ ಏನು ಇಷ್ಟವಾಗಿದೆ ಎಂಬುದನ್ನು ನೋಡಲಾಗುತ್ತದೆ ಏನೇನು ಅವರು ಇಷ್ಟಪಡುತ್ತಾರೆ. ಅಥವಾ ಇಷ್ಟ ಪಡುವುದಿಲ್ಲ ಎನ್ನುವುದನ್ನು ನೋಡುತ್ತಾರಲ್ಲವೇ. ಆದ್ದರಿಂದ ಬ್ರಹ್ಮಾಬಾಬಾರವರಿಗೆ ಏನು ಪ್ರಿಯವಾಗಿದೆ? ಯಾವ ಉಡುಗೊರೆ ಮೆಚ್ಚಿಗೆಯಾಗುತ್ತದೆ? ತಂದೆಯ ಮನಸ್ಸಿಗೆ ಪ್ರಿಯವಾದ ಗಿಫ್ಟ್, ಅವರಿಗೆ ಪ್ರಿಯವಾದ ಗಿಫ್ಟ್ ಏನೆಂದರೆ, ನಡೆದಾಡುತ್ತಾ ತಿರುಗಾಡುತ್ತಾ ಫರಿಶ್ತಾ ಸ್ವರೂಪರಾಗಿರುವುದು. ಫರಿಶ್ತಾ ಸಮಾನ ಆಗಿಬಿಡಿ. ಫರಿಶ್ತಾ ರೂಪದಲ್ಲಿ ಯಾವ ವಿಘ್ನವೂ ನಿಮ್ಮ ಮೇಲೆ ಪ್ರಭಾವವನ್ನುಂಟು ಮಾಡುವುದಿಲ್ಲ. ನಿಮ್ಮ ಸಂಕಲ್ಪ, ದೃಷ್ಟಿ, ವೃತ್ತಿ ಎಲ್ಲವೂ ಡಬಲ್ ಲೈಟ್ ಆಗಿಬಿಡುವವು ಗಿಫ್ಟ್ ನೀಡಲು ತಯಾರಾಗಿದ್ದೀರಾ? (ಹಾಂ ಜೀ) ನೋಡಿರಿ, ನಿಮ್ಮ ಸಮ್ಮತಿಯು ರಿಕಾರ್ಡ್ ಆಗುತ್ತಾ ಇದೆ ಒಳ್ಳೆಯದು, ಸುವರ್ಣ (ಗೋಲ್ಡನ್) ಪ್ರಪಂಚವನ್ನು ತರುವುದಕ್ಕಾಗಿ ಫರಿಶ್ತಾ ಆದರೆ ಹೇಗೆ ವಜ್ರವು ಹೊಳೆಯುತ್ತದೆಯೋ ಹಾಗೆ ನಿಮ್ಮ ಫರಿಶ್ತಾ ರೂಪವು ಪ್ರಕಾಶಿಸುವುದು. ಈ ಅಭ್ಯಾಸವನ್ನು ಚೆನ್ನಾಗಿ ಮಾಡುತ್ತಾ ಇರಿ.

ಅಮೃತವೇಳೆಯಲ್ಲಿ ಎದ್ದು ಸ್ಮೃತಿಯಲ್ಲಿ ಏನು ತಂದುಕೊಳ್ಳಬೇಕೆಂದರೆ - ನಾನು ಯಾರು? ಫರಿಶ್ತಾ ಆಗಿದ್ದೇನೆ. ಸಂಕಲ್ಪವನ್ನೇನೋ ಮಾಡುತ್ತೀರಿ ಹಾಗೂ ಬಯಸಿಯೂ ಬಯಸುತ್ತೀರಿ. ಆದರೂ ಸಹ ಯಾವಾಗ ನಿಮ್ಮ ಫಲಿತಾಂಶವನ್ನು ನೋಡುತ್ತೀರೋ ಹಾಗೂ ಬರೆದೂ ಕೊಡುತ್ತೀರಿ ಆಗ ಮೆಜಾರಿಟಿ (ಅಧಿಕ ಸಂಖ್ಯೆಯ) ಮಕ್ಕಳು ಏನು ಹೇಳುತ್ತಿದ್ದೀರಿ? ಎಷ್ಟು ಬಯಸುತ್ತೇವೆಯೋ ಅಷ್ಟು ಆಗಲಿಲ್ಲ ಎಂದು 50% ಆಯಿತು. 60% ಆಯಿತು ಎಂದು ಹೇಳುತ್ತೀರಿ. ಡೈಮಂಡ್ ಜೂಬ್ಲಿಯಲ್ಲಿಯೂ ಹೀಗೆ ಪರ್ಸೆಂಟೇಜ್ ನಲ್ಲಿ ಆಗುತ್ತೀರೋ ಅಥವಾ ಪೂರ್ಣರೂಪದಲ್ಲಿ ಆಗುತ್ತೀರಾ? ಏನಾಗುವುದು? ಡಬಲ್ ವಿದೇಶೀಯರು ಹೇಳಿರಿ ಪರ್ಸೆಂಟೇಜ್ ಇರುತ್ತದೆಯೇ? ಹೌದು ಅಥವಾ ಇಲ್ಲ ಎಂದು ಹೇಳಿರಿ. ಸ್ವಲ್ಪ ಸ್ವಲ್ಪ ರಿಯಾಯಿತಿ ಕೊಡೋಣವೇ. ಶಕ್ತಿಯರಲ್ಲಿ ಪರ್ಸೆಂಟೇಜ್ ಇರುತ್ತದೆಯೇ? ಉತ್ಸಾಹ-ಉಲ್ಲಾಸದಿಂದ ಮಾಡುವುದಿಲ್ಲ, ಯೋಚನೆ ಮಾಡಿ ಮಾಡುತ್ತಾರೆ. ಡಬಲ್ ವಿದೇಶೀಯರಾಗಲೀ, ಭಾರತೀಯರಾಗಲೀ ಒಂದುವೇಳೆ ಪರ್ಸೆಂಟೇಜ್ ಇಲ್ಲದೆ ಪೂರ್ಣಪಾಸ್ (ಉತ್ತೀರ್ಣ) ಆಗಿಬಿಟ್ಟರೆ ಬ್ರಹ್ಮಬಾಬಾರವರು ಏನು ಮಾಡುತ್ತಾರೆ ಗೊತ್ತಿದೆಯೇ? ಕೇವಲ ಭೇಷ್ ಎಂದು ಮೆಚ್ಚಿಗೆ ಸೂಚಿಸುವುದಲ್ಲದೇ ಇನ್ನೇನು ಮಾಡುತ್ತಾರೆ? ಪ್ರತಿದಿನವೂ ನಿಮ್ಮನ್ನು ಅಮೃತವೇಳೆಯಲ್ಲಿ ತಮ್ಮ ಬಾಹುಗಳಲ್ಲಿ ಕರೆದುಕೊಳ್ಳುವರು. ನಾನು ಬ್ರಹ್ಮಾಬಾಬಾರವರ ಬಾಹುಗಳಲ್ಲಿ ಅತೀಂದ್ರಿಯ ಸುಖದಲ್ಲಿ ತೇಲಾಡುತ್ತಿದ್ದೇನೆಂದು ನಿಮಗೆ ಅನುಭವವಾಗುವುದು. ದೊಡ್ಡ ದೊಡ್ಡ ಆಲಿಂಗನವು ದೊರೆಯುವುದು ಹಾಗೂ ಜೊತೆ ಜೊತೆಯಲ್ಲಿ ಬ್ರಹ್ಮಾಬಾಬಾರಿಗೆ ಮಕ್ಕಳೊಂದಿಗೆ ತುಂಬಾ ಪ್ರೀತಿಯಿರುವುದರಿಂದ ಆಲಿಂಗನ ಮಾಡುವರು ಹಾಗೂ ಇಡೀ ದಿನವೂ ಏನು ದೊರೆಯುವುದು? ಹೇಗೆ ಚಿತ್ರಗಳಲ್ಲಿ ತೋರಿಸುತ್ತಾರೆ ಯಾವಾಗ ಬಿರುಗಾಳಿಯು ಬಂದಿತೊ. ಪ್ರವಾಹವು ಉಕ್ಕಿ ಬಂದಿತೋ ಆಗ ಏನಾಯಿತು? ಸರ್ಪವು ಛತ್ರಛಾಯೆ ಆಗಿಬಿಟ್ಟಿತು. ಅವರಂತೂ ಶ್ರೀ ಕೃಷ್ಣನಿಗಾಗಿ ಸ್ಥೂಲ ಮಾತಾಗಿ ತೋರಿಸಿಬಿಟ್ಟಿದ್ದಾರೆ ಆದರೆ ವಾಸ್ತವದಲ್ಲಿ ಇದು ಆತ್ಮಿಕ ಮಾತು. ಯಾರು ಫರಿಶ್ತೆಗಳಾಗುತ್ತಾರೆಯೋ ಅವರ ಎದುರಿನಲ್ಲಿ ಒಂದುವೇಳೆ ಯಾವುದಾದರೂ ಪರಿಸ್ಥಿತಿಯು ಬಂದರೆ ಅಥವಾ ಯಾವುದಾದರೂ ವಿಘ್ನವು ಬಂದರೆ. ತಂದೆಯು ಸ್ವಯಂ ನಿಮ್ಮ ಛತ್ರಛಾಯೆ ಆಗಿಬಿಡುತ್ತಾರೆ. ಇದನ್ನು ಮಾಡಿ ನೋಡಿರಿ ಬಾಪ್‌ದಾದಾರವರು ಸುಮ್ಮನೆ ಹೇಳುವುದಿಲ್ಲ. ಒಳ್ಳೆಯದು.

ಯಾವ ಮಕ್ಕಳ ಡೈಮಂಡ್ ಜೂಬ್ಲಿ ಆಗಿದೆಯೋ ಅವರು ಕೈ ಎತ್ತಿರಿ. ಈಗ ಡೈಮಂಡ್ ಜೂಬ್ಲಿಯವರೊಂದಿಗೆ ಬಾಪ್‌ದಾದಾರವರು ಮಾತನಾಡುತ್ತಾರೆ. ನೀವು 14 ವರ್ಷದಲ್ಲಿ ಯೋಗ, ತಪಸ್ಸು ಮಾಡಿದಿರಿ. ಆಗ ವಿಘ್ನಗಳು ಎಷ್ಟೊಂದು ಬಂದವು? ಆದರೆ ನಿಮಗೆ ಏನಾದರೂ ಆಯಿತೇ? ಬಾಪ್‌ದಾದಾರವರು ಛತ್ರಛಾಯೆ ಆದರಲ್ಲವೇ. ಎಷ್ಟು ದೊಡ್ಡ ದೊಡ್ಡ ಘಟನೆಗಳು ಆದವು. ಇಡೀ ಪ್ರಪಂಚದ ಮುಖ್ಯಸ್ಥರು, ಮುಖಂಡರು, ಗುರುಜನರು ಎಲ್ಲರೂ ವಿರೋಧಿಗಳಾಗಿ ಬಿಟ್ಟರು. ಬ್ರಹ್ಮಾಕುಮಾರಿಯರು ಮಾತ್ರವೇ ಅಚಲವಾಗಿದ್ದೀರಿ. ಪ್ರತ್ಯಕ್ಷದಲ್ಲಿ ಅಧಿಕಾರಿ ಜೀವನವನ್ನೂ ನೋಡಿದಿರಿ. ತಪಸ್ಸಿನ ಸಮಯದಲ್ಲಿ ಭಿನ್ನ ಭಿನ್ನ ವಿಘ್ನಗಳನ್ನೂ ನೋಡಿದಿರಿ. ಬಂದೂಕೂ ಬಂದಿತು, ಕತ್ತಿಗಳೂ ಬಂದವು, ಎಲ್ಲವೂ ಬಂದವೂ ಆದರೆ ಛತ್ರಛಾಯೆಯು ಇತ್ತಲ್ಲವೇ. ಏನಾದರೂ ನಷ್ಟವಾಯಿತೇ? ಯಾವಾಗ ಪಾಕೀಸ್ತಾನವು ಅಸ್ತಿತ್ವದಲ್ಲಿ ಬಂದಿತೋ ಆಗ ಏನಾಯಿತು? ಪ್ರಾಪಂಚಿಕ ಜನರು ಗಲಭೆ, ಉಪದ್ರವಗಳಿಗೆ ಹೆದರಿ ಎಲ್ಲವನ್ನೂ ತೊರೆದು ಓಡಿ ಹೋದರು ಹಾಗೂ ನಿಮ್ಮ ಟೆನ್ನಿಸ್ ಕೋರ್ಟ್ ಸಾಮಾನಿನಿಂದ ತುಂಬಿ ಹೋಯಿತು. ತುಂಬಲ್ಪಟ್ಟಿತಲ್ಲವೇ ಏಕೆಂದರೆ ಏನು ಉತ್ತಮವಾದ ವಸ್ತುವೆನಿಸುತ್ತಿತ್ತೋ ಅದನ್ನು ಹೇಗೆ ಬಿಡುವುದು, ಆ ವಸ್ತುಗಳೊಂದಿಗೆ ಪ್ರೀತಿಯಿರುತ್ತದೆಯಲ್ಲವೇ? ಯಾವ ಸಿಂಧೀ ಜನರು ಆ ಸಮಯದಲ್ಲಿ ವಿರೋಧಿಯಾಗಿದ್ದರೋ ಅವರೂ ನಿಂದೆಯನ್ನೂ ಮಾಡುತ್ತಿದ್ದರು ಹಾಗೂ ಸಾಮಾನನ್ನೂ ಕೊಟ್ಟರು ಏನು ಉತ್ಕೃಷ್ಟವಾದ ವಸ್ತುಗಳಿದ್ದವೋ ಅವುಗಳನ್ನು ಕೈಜೋಡಿಸಿ ನೀವೇ ಉಪಯೋಗಿಸಿರೆಂದು ಹೇಳಿ ಕೊಟ್ಟು ಹೋದರು. ಪ್ರಪಂಚದ ಜನರಿಗೆ ಉಪದ್ರವವಿತ್ತು ಹಾಗೂ ಬ್ರಹ್ಮಾಕುಮಾರಿಯರಿಗೆ 5 ರೂಪಾಯಿಗೆ ಎತ್ತಿನಬಂಡಿಯ ತುಂಬಾ ತರಕಾರಿಯು ಸಿಗುತ್ತಿತ್ತು. ಐದು ರೂಪಾಯಿಯಲ್ಲಿ ತರಕಾರಿಯು ದೊರೆಯಿತು. ನೀವು ಎಷ್ಟು ಮೋಜಿನಿಂದ ತರಕಾರಿಯನ್ನು ತಿನ್ನುತ್ತಿದ್ದಿರಿ. ಪ್ರಪಂಚದ ಜನರು ಭಯ ಪಡುತ್ತಿದ್ದರು ಹಾಗೂ ನೀವು ನಾಟ್ಯ ಮಾಡುತ್ತಾ ಇದ್ದಿರಿ. ಹೀಗೆ ಪ್ರತ್ಯಕ್ಷ ಜೀವನದಲ್ಲಿ ಬ್ರಹ್ಮಾಬಾಬಾ, ಶಿವಬಾಬಾ ಇಬ್ಬರೂ ಛತ್ರಛಾಯೆಯಾಗಿ ಎಷ್ಟು ಸುರಕ್ಷಿತವಾಗಿ ಸ್ಥಾಪನೆಯ ಕಾರ್ಯವನ್ನು ಮಾಡಿದರು. ಹೀಗೆ ಇವರಿಗೆ ಅನುಭವವಿರುವುದರಿಂದ ನೀವು ಅನುಭವ ಮಾಡಲು ಸಾಧ್ಯವಿಲ್ಲವೇ? ಮೊದಲು ತಾವು ಏನು ಬೇಕೋ. ಎಷ್ಟು ಬೇಕೋ ಅಷ್ಟು ಈ ಡೈಮಂಡ್ ವರ್ಷದಲ್ಲಿ ಛತ್ರಛಾಯೆಯ ಹಾಗೂ ಬ್ರಹ್ಮಾಬಾಬಾರ ಪ್ರೀತಿಯ ವಾಸ್ತವಿಕ (ಪ್ರಾಕ್ಟಿಕಲ್) ಅನುಭವವನ್ನು ನೀವು ಮಾಡಬಹುದು. ಇದು ಈ ವರ್ಷಕ್ಕೆ ವರದಾನ ಅರ್ಥಾತ್ ಸಹಜವಾದ ಪ್ರಾಪ್ತಿಯಾಗಿದೆ. ಅಧಿಕ ಮರುಷಾರ್ಥ ಮಾಡುವ ಅವಶ್ಯಕತೆಯುಂಟಾಗುವುದಿಲ್ಲ. ಮರುಷಾರ್ಥದಿಂದ ದಣಿದು ಹೋಗುತ್ತೀರಲ್ಲವೇ ಯಾವ ಸಮಯದಲ್ಲಿ ಯಾರಾದರೂ ಪುರುಷಾರ್ಥ ಮಾಡಿ ದಣಿದು ಹೋಗುತ್ತಾರೋ ಆಗ ಬಾಪ್‌ದಾದಾರವರು ಅವರ ಚೆಹರೆಯನ್ನು ನೋಡುತ್ತಾರೆ. ಆಗ ತುಂಬಾ ದಯೆಯೂ ಬರುತ್ತದೆ ಆದ್ದರಿಂದ ಈಗ ಏನು ಮಾಡುವಿರಿ? ಏನಾಗುವಿರಿ? ಫರಿಶ್ತಾ, ಫರಿಶ್ತಾ ರೂಪದಲ್ಲಿ ನಡೆದಾಡಿರಿ, ತಿರುಗಾಡಿರಿ, ಇದೇ ಡೈಮಂಡ್ ಆಗುವುದಾಗಿದೆ. ಏಕೆಂದರೆ, ಯಾವುದು ತುಂಬಾ ಬೆಲೆಬಾಳುವ ಅಮೂಲ್ಯ ವಜ್ರವಿರುತ್ತದೆಯೋ ಅದರ ಚಿಹ್ನೆ ಏನಿರುತ್ತದೆ? ಲೈಟ್ನ (ಪ್ರಕಾಶದ) ಮುಂದೆ ಇಟ್ಟರೆ ಹೊಳೆಯುತ್ತದೆ. ಹಾಗೂ ಯಾವಾಗ ಪ್ರಕಾಶಿಸುತ್ತದೆಯೋ ಆಗ ಅದರಿಂದ ಕಿರಣಗಳು ಹೊರಹೊಮ್ಮುತ್ತವೆ. ಬಣ್ಣ ಬಣ್ಣದ ಕಿರಣಗಳು ಹೊರಬರುತ್ತವೆ. ಭಿನ್ನ ಭಿನ್ನ ವರ್ಣಗಳು ಕಾಣಿಸುತ್ತದೆ. ಯಾವಾಗ ನೀವು ಸತ್ಯ ವಜ್ರವಾಗುವಿರಿ, ಫರಿಶ್ತೆಯಾಗುವಿರಿ ಅಂದಾಗ ನಿಮ್ಮ ಫರಿಶ್ತಾ ಸ್ವರೂಪದಿಂದ ಈ ಅಷ್ಟ ಶಕ್ತಿಗಳು ಕಾಣಿಸುವವು. ಹೇಗೆ ಆ ಬಣ್ಣ ಕಿರಣಗಳ ರೂಪದಲ್ಲಿ ಕಾಣಿಸುವವೋ. ಹಾಗೆಯೇ ನೀವು ವಜ್ರ ಅರ್ಥಾತ್ ಫರಿಶ್ತಾ ರೂಪವಾದರೆ ನಡೆಯುತ್ತಾ, ತಿರುಗಾಡುತ್ತಾ ನಿಮ್ಮ ಮೂಲಕ ಅಷ್ಟ ಶಕ್ತಿಗಳ ಕಿರಣಗಳ ಅನುಭೂತಿ

ಆಗುವುದು. ಒಬ್ಬೊಬ್ಬರಿಗೆ ನಿಮ್ಮಿಂದ ಸಹನೆ ಶಕ್ತಿಯು ಅನುಭವವಾಗುತ್ತದೆ. ಒಬ್ಬೊಬ್ಬರಿಗೆ ನಿಮ್ಮಿಂದ ನಿರ್ಣಯ ಶಕ್ತಿಯು ಅನುಭವವಾಗುತ್ತದೆ. ಯಾವುದಾದರೊಂದು ಶಕ್ತಿಯು ಅನುಭವವಾಗುತ್ತದೆ, ನೀವು ಎಷ್ಟು ಜಾಸ್ತಿ ಅಭ್ಯಾಸ ಮಾಡುತ್ತೀರೋ ಅಷ್ಟು ನಿಮ್ಮ ಮೂಲಕ ಅನ್ಯರಿಗೆ ಅನುಭವವಾಗುವುದು. ನಾಳೆಯಿಂದ ಹೊಸ ವರ್ಷವು ಪ್ರಾರಂಭವಾಗುವುದು ಹಾಗೂ ಡೈಮಂಡ್ ಜೂಬ್ಲಿಯೂ ಪ್ರಾರಂಭವಾಗುವುದರಿಂದ ನಾಳೆಯಿಂದ ಅರ್ಥಾತ್ ಮೊದಲನೆಯ ಮಾಸ, ಜನವರಿಯಿಂದ ನೀವು ಫರಿಶ್ತಾ ರೂಪದಲ್ಲಿರುವುದನ್ನು ಅಭ್ಯಾಸ ಮಾಡಿರಿ ಹಾಗೂ ಎರಡನೆಯ ಮಾಸದಲ್ಲಿ ನಿಮ್ಮ ಅಭ್ಯಾಸವು ಇನ್ನೂ ಅಧಿಕವಾಗುವುದು. ಮೂರನೆಯ ಮಾಸದಲ್ಲಿ ಹಾಗೂ ಎಷ್ಟೆಷ್ಟು ಅಧಿಕವಾಗುತ್ತಾ ಹೋಗುತ್ತದೆಯೋ ಅಷ್ಟಷ್ಟು ನಿಮ್ಮ ಮೂಲಕ ಅನ್ಯರಿಗೆ ಅನುಭವವಾಗುವುದು ತಿಳಿಯಿತೇ? ಇದು ಬ್ರಹ್ಮಾಬಾಬಾರವರಿಗೆ ಕೊಡಬೇಕಾದ ಗಿಫ್ಟ್ ಆಗಿದೆ. ಎಲ್ಲರೂ ಕೊಡುವಿರಲ್ಲವೇ ಅಥವಾ ಯಾರೋ ಒಬ್ಬೊಬ್ಬರು ಮಾತ್ರ ಕೊಡುವಿರೋ?

ಒಳ್ಳೆಯದು. ಮಧುಬನದವರೂ ಸಹ ಗಿಫ್ಟ್ ಕೊಡುವಿರಲ್ಲವೇ. ಮಧುಬನದವರಂತೂ ಆಗಲಿ ಬಾಬಾ ಎಂದು ಹೇಳುವುದರಲ್ಲಿ ಬುದ್ಧಿವಂತರಾಗಿದ್ದಾರೆ. (ಜ್ಞಾನಸರೋವರದಲ್ಲಿಯೂ ಮುರಳಿಯನ್ನು ಕೇಳುತ್ತಾ ಇದ್ದಾರೆ) ಜ್ಞಾನಸರೋವರದವರು ಫರಿಶ್ತಾ ಆಗಿಬಿಡುವರು. ಹಾಗೂ ಮೇಲೆ ಕುಳಿತುಕೊಂಡು ಅನುವಾದ ಮಾಡುತ್ತಿದ್ದ ಮೈಕ್ ನವರು ಎಲ್ಲರೂ ಫರಿಶ್ತಾ ಆಗಬೇಕು. ಕಷ್ಟವೆನಿಸುವುದಿಲ್ಲವೇ? 63 ಜನ್ಮಗಳಿಂದ ಈ ಶರೀರದೊಂದಿಗೆ ಪ್ರೀತಿಯಿದೆ. ಆದ್ದರಿಂದ ಕಷ್ಟವಾಗುವುದಿಲ್ಲವೇ? ಯಾರು ದೃಢ ನಿಶ್ಚಯವನ್ನು ಇಟ್ಟುಕೊಳ್ಳುತ್ತಾರೆಯೋ ಅವರ ನಿಶ್ಚಯದ ಫಲವಾದ ವಿಜಯವು ಎಂದೂ ಕೈ ತಪ್ಪಿ ಹೋಗುವುದು ಸಾಧ್ಯವಿಲ್ಲ ಪಂಚತತ್ವಗಳು ಅಥವಾ ಆತ್ಮರು ಎಷ್ಟೇ ಅಡ್ಡಿ ಮಾಡಿದರೂ ಅವರು ಅಡ್ಡಿ ಮಾಡುವರು. ಹಾಗೂ ನೀವು ಅಳವಡಿಸಿಕೊಳ್ಳುವ ಶಕ್ತಿಯಿಂದ ಆ ವಿರೋಧವನ್ನು ಅಡಗಿಸಿ ಬಿಡುವಿರಿ. ಏಕೆಂದರೆ, ದೃಢ ನಿಶ್ಚಯವಿದೆ. ಈ ಸ್ಥಾಪನೆಯ 60 ವರ್ಷಗಳು ಏನು ನಡೆದವೋ ಇದರಲ್ಲಿಯೂ ಸಹ ಆದಿಯಿಂದ ಬ್ರಹ್ಮಾಬಾಬಾ ಹಾಗೂ ಅನನ್ಯ ಮಕ್ಕಳದು ಕಮಾಲ್ ಇದ್ದಿತು. ಎಂದೂ ನಿಶ್ಚಯದಲ್ಲಿ ಗಡಿಬಿಡಿಯಾಗಲಿಲ್ಲ ವಿಜಯವು ಆಗಿಯೇ ಬಿಟ್ಟಿದೆ ಎನ್ನುವುದೇ ಸದಾ ಬ್ರಹ್ಮಾಬಾಬಾರವರ ನುಡಿಯಾಗಿತ್ತು.

ಹೀಗೆ ಈ ದಿನ ವಿಶೇಷವಾಗಿ ಬ್ರಹ್ಮಾಬಾಬಾರವರು ಮಕ್ಕಳೆಲ್ಲರಿಗೂ ವಿಶೇಷ ಶುಭಾಶಯಗಳನ್ನು ಹಾಗೂ ತುಂಬಾ ತುಂಬಾ ಪ್ರೀತಿಯನ್ನು ಕೊಟ್ಟರು - ಮಕ್ಕಳು ಎಷ್ಟೊಂದು ಇದ್ದರೂ. 4 ಲಕ್ಷವೇ ಇರಲಿ, ಅಥವಾ 14 ಲಕ್ಷವಿರಲಿ, ಬ್ರಹ್ಮಾಬಾಬಾರ ಬಾಹುಗಳು ಎಷ್ಟು ದೊಡ್ಡವಾಗಿವೆಯೆಂದರೆ 14 ಲಕ್ಷ ಮಕ್ಕಳಿದ್ದರೂ ಒಟ್ಟಿಗೇ ಭುಜಗಳಲ್ಲಿ ಸಮಾವೇಶ ಮಾಡಿಕೊಳ್ಳಬಹುದು, ಆದ್ದರಿಂದ ಪರಮಾತ್ಮನ ವಿರಾಟ ರೂಪವನ್ನು ಭಕ್ತಿಮಾರ್ಗದಲ್ಲಿ ತೋರಿಸುತ್ತಾರೆ. ಅದರಲ್ಲಿ ಎಲ್ಲರೂ ಇದ್ದಾರೆ. ಹೀಗೆ ನೀವೆಲ್ಲರೂ ಬ್ರಹ್ಮಾಬಾಬಾರವರ ಭುಜಗಳಲ್ಲಿ ತುಂಬಿಕೊಂಡಿದ್ದೀರಿ. ಏನಾದರೂ ಆಗಲಿ, ಆದರೆ ಸಣ್ಣ ಮಗುವು ಏನು ಮಾಡುತ್ತದೆ? ಒಂದುವೇಳೆ ಅದಕ್ಕೆ ಯಾರಾದರೂ ಏನಾದರೂ ಅಂದರೆ, ಅಥವಾ ಏನಾದರೂ ಆದರೆ ಏನು ಮಾಡುತ್ತದೆ? ಬಂದು ತಾಯಿಯ ಅಥವಾ ತಂದೆಯ ಬಾಹುಗಳಲ್ಲಿ ಅಡಗಿಕೊಳ್ಳುತ್ತದೆ. ಹೀಗೆ ಮಾಡುತ್ತದೆಯಲ್ಲವೇ. ಹಾಗೆಯೇ ನೀವೂ ಸಹ ಮಾಡಿರಿ. ಮಕ್ಕಳಾಗಿದ್ದೀರಲ್ಲವೇ ಅಥವಾ ಈಗ ದೊಡ್ಡವರಾಗಿ ಬಿಟ್ಟಿದ್ದೀರೋ? 100 ವರ್ಷದ

ವಯಸ್ಸಿನವರೂ ಸಹ ತಂದೆಯ ಮುಂದೆಯಂತೂ ಮಗುವೇ ಆಗಿದ್ದಾರೆ. ಆದ್ದರಿಂದ ನಿಮಗೂ ಸಹ ಏನೇ ಆದರೂ ಬ್ರಹ್ಮಾಬಾಬಾರ ಮಡಿಲಿನಲ್ಲಿ ಅಡಗಿಕೊಂಡುಬಿಡಿ, ಅಷ್ಟೇ. ಇದಂತೂ ಸಹಜ ಆಗಿದೆಯಲ್ಲವೇ? ಒಳ್ಳೆಯದು,

ಒಳ್ಳೆಯದು. ಇವು ಡೈಮಂಡ್ ಜೂಬ್ಲಿಯ ವಿಚಾರಗಳಾಗಿವೆ. ಜೊತೆಯಲ್ಲಿ ಹೊಸ ವರ್ಷದ ಈದಿನ ಆಚರಿಸುತ್ತೀರಲ್ಲವೇ? ಆನಂದೋತ್ಸವವು 12 ಘಂಟೆಗೆ ಈ ವರ್ಷವು ಪೂರ್ತಿಯಾಗುತ್ತದೆ. ಇನ್ನೂ ಸ್ವಲ್ಪ ಸಮಯವಿದೆ. ಇನ್ನೂ ಹಳೆಯ ವರ್ಷದಲ್ಲಿ ಕುಳಿತುಕೊಂಡಿದ್ದೀರಿ. ಆದರೆ ಹೊಸ ವರ್ಷದ ಪ್ರಾರಂಭೋತ್ಸವ ಮಾಡುತ್ತಾ ಇದ್ದೀರಿ. ಇದಕ್ಕಾಗಿ ಬಂದಿದ್ದೀರಲ್ಲವೇ? ಡಬಲ್ ವಿದೇಶೀಯರು ಅಧಿಕವಾಗಿ ಏಕೆ ಬಂದಿದ್ದೀರಿ? ಸಾಮಾನ್ಯವಾಗಿಯಂತೂ ಭಾರತೀಯರ ಸರದಿಯಾಗಿದೆ. ಡಬಲ್ ವಿದೇಶೀಯರು ಏಕೆ ಬಂದಿದ್ದೀರಿ? ಹೊಸ ವರ್ಷದ ಪ್ರಾರಂಭೋತ್ಸವ ಆಚರಿಸುವ ಸಲುವಾಗಿ. ಕ್ರಿಸ್‌ಮಸ್ ಉತ್ಸವ ಆಚರಿಸುವ ಸಲುವಾಗಿ. ಬಾಪ್‌ದಾದಾರಿಗೆ ಡಬಲ್ ವಿದೇಶೀಯರೊಂದಿಗೆ ಚಿಟ್ ಚಾಟ್ ಮಾಡುವುದರಲ್ಲಿ (ಖುಷಿಯ ವಿಚಾರಗಳ ಬಗ್ಗೆ ಮಾತನಾಡುವುದರಲ್ಲಿ) ಹಿತವೆನಿಸುತ್ತದೆ. ಆದ್ದರಿಂದ ಹೊಸ ವರ್ಷವನ್ನೂ ಆಚರಿಸಿರಿ. ಹಳೆಯ ವರ್ಷಕ್ಕೆ ಏನು ಮಾಡುವಿರಿ? ಬೀಳ್ಕೊಡಿರಿ. ಕೇವಲ ಬೀಳ್ಕೊಡುಗೆ ಕೊಡುತ್ತೇವೆಂದು ಬಾಯಿಯಿಂದ ಹೇಳಿಬಿಢಹಡುವುದಲ್ಲ ಅಥವಾ ಹಳೆಯ ವರ್ಷವು ಹೋಗುತ್ತಾ ಇದೆ. ಹೊಸವರ್ಷವು ಬರುತ್ತಾ ಇದೆ ಎಂದು ತೋರಿಸುವ ಚಿತ್ರವನ್ನು ರಚನೆ ಮಾಡುತ್ತೀರೋ? ಹೇಗೆ ಬೀಳ್ಕೊಡಿಗೆ ಕೊಡುತ್ತೀರಿ? ಹಳೆಯ ವರ್ಷಕ್ಕೆ ಬೀಳ್ಕೊಡುಗೆ ಏನು ಕೊಡುವಿರಿ? ಕೇವಲ ಗೀತೆಯನ್ನು ಹಾಡುತ್ತೀರಾ. ನಾಟ್ಯ ಮಾಡುತ್ತೀರಾ, ಧುಮಕುತ್ತೀರಾ. ಒಳ್ಳೆಯದು ಇನ್ನೇನು ಮಾಡುತ್ತೀರಿ? ವರ್ಷವು ಸಮಾಪ್ತಿಯಾಗುತ್ತಾ ಇದೆ. ಅದು ಬೀಳ್ಕೊಡುಗೆ ತೆಗೆದುಕೊಳ್ಳುತ್ತಾ ಇದೆ. ಪುನಃ ಈ ವರ್ಷವು ಯಾವಾಗ ಬರುತ್ತದೆ? ಐದುಸಾವಿರ ವರ್ಷದ ನಂತರ ಬರುವುದು. ಮುಂಚೆಯಂತೂ ಬರುವುದಿಲ್ಲ ತಾನೇ! ಹೀಗೆ ಐದು ಸಾವಿರ ವರ್ಷಗಳವರೆಗೆ ನಿಮ್ಮಿಂದ ಬೀಳ್ಕೊಡುಗೆ ತೆಗೆದುಕೊಳ್ಳುವುದು. ಯಾರು ಬೀಳ್ಕೊಡುಗೆ ತೆಗೆದುಕೊಳ್ಳುತ್ತಾರೋ ಅವರಿಗೂ ಏನಾದರೂ ಕೊಡಲ್ಪಡುತ್ತದೆ. ನೋಡಿರಿ ನೀವೂ ಸಹ ಹೋಗುವಾಗ ನಿಮಗೆ ಬೀಳ್ಕೊಡಿಗೆಯ ಗಿಫ್ಟ್ ದೊರೆಯುತ್ತದೆ. ಆದ್ದರಿಂದ ನೀವು ಈ ಹಳೆಯ ವರ್ಷಕ್ಕೆ ಏನು ಕೊಡುವಿರಿ? ಏನಾದರೂ ಕೊಡುತ್ತೀರೋ ಅಥವಾ ಹೋಗು ಹೋಗು ಎಂದು ಹೇಳಿ ಖಾಲಿ ಕೈಯಲ್ಲಿ ಕಳುಹಿಸಿ ಬಿಡುತ್ತೀರೋ? ಏನು ಕೊಡುವಿರಿ? ಹಳೆಯದಕ್ಕೆ ಯಾವುದು ಇಷ್ಟವಾಗುತ್ತದೆ. ಹಳೆಯ ವಸ್ತುವು ಇಷ್ಟವಾಗುತ್ತದೆ. (ಲೋಪದೋಷ, ಬಲಹೀನತೆಗಳನ್ನು ಕೊಡುವೆವು). ಮಕ್ಕಳು ಲೋಪದೋಷ, ದೌರ್ಬಲ್ಯವನ್ನೇನೋ(ಬಲಹೀನತೆ) ಕೊಡುತ್ತೀರಿ. ಆದರೆ ವಾಪಸ್ಸು ತೆಗೆದುಕೊಂಡು ಬಿಡುತ್ತೀರಿ. ನೋಡಿರಿ. ಹಳೆಯ ವರ್ಷವು ವಾಪಸ್ಸು ಬರುವುದಿಲ್ಲ. ಅದೇ ಬುದ್ಧಿವಂತವಾಗಿದೆಯಲ್ಲವೇ. ಅದು ಐದು ಸಾವಿರ ವರ್ಷಕ್ಕಿಂತ ಮುಂಚೆ ಬರುವುದಿಲ್ಲ. ನೀವು ಹಳೆಯ ವಸ್ತುಗಳನ್ನು ಏಕೆ 'ವಾಪಸ್ಸು ತೆಗೆದುಕೊಳ್ಳುತ್ತೀರಿ? ಚೀಟಿ ಬರೆದು ಕೊಡುತ್ತೀರಿ - ಆಗಲಿ ಬಾಬಾ ಕ್ರೋಧಮುಕ್ತ ಆಗಿಬಿಡುತ್ತೇನೆ ಎಂದು ತುಂಬಾ ಚೆನ್ನಾಗಿ ಬರೆದುಕೊಡುತ್ತಾರೆ. ಹಾಗೂ ರುಹ್ ರಿಹಾನ್ (ತಂದೆಯೊಂದಿಗೆ ಅತ್ಮೀಕ ವಾರ್ತಾಲಾಪ) ಸಹ ಮಾಡುವಾಗ ತುಂಬಾ ಚೆನ್ನಾಗಿ ಕತ್ತು ಅಲುಗಾಡಿಸುತ್ತೀರಿ. ಆಗಲಿ ಆಗಲಿ ಎಂದು ಹೇಳುತ್ತೀರಿ. ಆಮೇಲೆ ಏಕೆ ವಾಪಸ್ಸು ತೆಗೆದುಕೊಂಡು ಬಿಡುತ್ತೀರೋ ಗೊತ್ತಿಲ್ಲ ಹಳೆಯ ವಸ್ತುಗಳೊಡನೆ ಪ್ರೀತಿ ಇಟ್ಟುಕೊಳ್ಳುತ್ತಾರೆ. ಆಮೇಲೆ ಹೇಳುತ್ತೀರಿ ನಾನಂತೂ ಬಿಟ್ಟು ಬಿಟ್ಟೆನು, ಅದು ನನ್ನನ್ನು ಬಿಡುತ್ತಿಲ್ಲ ಎಂದು. ತಂದೆಯು ಹೇಳುತ್ತಾರೆ. ನೀವು ನಡೆಯುತ್ತಾ ಇರುವಾಗ ಏನಾದರೂ

ಮುಳ್ಳಾಗಲೀ ಅಥವಾ ಇನ್ನೇನಾದರೂ ವಸ್ತುವಾಗಲೀ ಚುಚ್ಚಿಬಿಟ್ಟರೆ ಅಥವಾ ಅಂಟಿಕೊಂಡರೆ, ನೀವು ಏನು ಮಾಡುತ್ತೀರಿ? ಇದು ನನ್ನನ್ನು ಬಿಡಲಿ ಎಂದು ಯೋಚಿಸುತ್ತೀರೋ ಅಥವಾ ನಾನು ಬಿಡಬೇಕು, ತೆಗೆದುಹಾಕಬೇಕು ಎಂದು ಯೋಚಿಸುತ್ತೀರೋ? ಯಾರು ಬಿಡುತ್ತಾರೆ? ಒಳ್ಳೆಯದು, ಒಂದುವೇಳೆ ಅದು ಪುನಃ ಗಾಳಿಯಲ್ಲಿ ಹಾರುತ್ತಾ ನಿಮ್ಮ ಬಳಿ ಬಂದುಬಿಟ್ಟರೆ ಆಗ ಏನು ಮಾಡುವಿರಿ? ಪುನಃ ಇಟ್ಟುಕೊಳ್ಳುತ್ತೀರೋ ಅಥವಾ ಕಿತ್ತೊಗೆಯುತ್ತೀರೋ? ಕಿತ್ತುಹಾಕುತ್ತೀರಲ್ಲವೇ? ಹಾಗೆಯೇ ಈ ವಸ್ತುಗಳನ್ನು ಏಕೆ ತೆಗೆದೊಗೆಯುವುದಿಲ್ಲ? ಒಂದುವೇಳೆ ಅಪ್ಪಿತಪ್ಪಿ ಬಂದುಬಿಟ್ಟರೂ ಯಾವಾಗ ನಿಮಗೆ ಇಷ್ಟವಿಲ್ಲವೋ ಆದರೂ ಆ ವಸ್ತುವು ನಿಮ್ಮ ಬಳಿ ಪುನಃ ಬಂದರೆ, ನೀವು ಆ ವಸ್ತುವನ್ನು ಜೋಪಾನ ಮಾಡಿ ಇಟ್ಟುಕೊಳ್ಳುತ್ತೀರಾ? ಯಾರಾದರೂ ಯಾರಿಗಾದರೂ ಗಮನಿಸದೆ ಅಥವಾ ತಪ್ಪುಮಾಡಿ ಒಂದುವೇಳೆ ಕೆಟ್ಟು ಹೋಗಿರುವ ವಸ್ತುವನ್ನು ಕೊಟ್ಟರೆ ಏನು ಮಾಡುವರು? ಅಲಮಾರಿನಲ್ಲಿ ಅಲಂಕರಿಸಿ ಇಡುತ್ತಾರೆಯೇ? ಇಲ್ಲ. ಬಿಸಾಡುತ್ತಾರಲ್ಲವೇ? ಆಮೇಲೆ ಅದರ ಮುಖವನ್ನು ತೋರಿಸದಂತೆ ಎಸೆದುಬಿಡುತ್ತಾರೆ. ಹಾಗಾದರೆ ಇದನ್ನು ಪುನಃ ಏಕೆ ವಾಪಸ್ಸು ತೆಗೆದುಕೊಳ್ಳುತ್ತೀರಿ? ವಾಪಸ್ಸು ತೆಗೆದುಕೊಳ್ಳಿರಿ ಎಂದು ಬಾಪ್‌ದಾದಾರವರು ಹೇಳುತ್ತೇವೆಯೇ? ಇದು ಶ್ರೀಮತವಾಗಿದೆಯೇ? ಶ್ರೀಮತವಲ್ಲ ತಾನೇ? ಆದರೆ ಏಕೆ ತೆಗೆದುಕೊಂಡು ಇಟ್ಟುಕೊಳ್ಳುತ್ತೀರಿ? ಆದಂತೂ ವಾಪಸ್ಸು ಬರುತ್ತದೆ. ಏಕೆಂದರೆ ಅದಕ್ಕೆ ನಿಮ್ಮೊಂದಿಗೆ ಪ್ರೀತಿಯಿದೆ. ಆದರೆ ನಿಮಗೆ ಅದರೊಂದಿಗೆ ಪ್ರೀತಿಯಿಲ್ಲ. ಅದಕ್ಕೆ ನೀವು ಇಷ್ಟವಾಗುತ್ತೀರಿ. ಆದರೆ ನಿಮಗೆ ಅದರೊಂದಿಗೆ ಇಷ್ಟವಾಗದಿದ್ದರೆ ಏನು ಮಾಡಬೇಕು? ಬಾಪ್‌ದಾದಾ ಎಲ್ಲಾ ಮಕ್ಕಳಿಗೂ ಏನು ಹೇಳುತ್ತಾರೆಂದರೆ, ಹಳೆಯ ವರ್ಷಕ್ಕೆ ಬೀಳ್ಕೊಡಿರಿ ಅರ್ಥಾತ್ ಮನಸ್ಸಿನಲ್ಲಿ ವಿಚಾರ ಮಾಡಿದ್ದೀರಲ್ಲವೇ. ಎಷ್ಟು ಅವಗುಣಗಳ ಬಗ್ಗೆ ಸೂಚನೆ ಕೊಟ್ಟಿದ್ದೇವೆ? ಎಷ್ಟು ದೋಷಗಳಿವೆ. ಜಾಸ್ತಿ ಇವೆಯೇನು? (8 ದೋಷಗಳಿವೆ) ಹಾಗಾದರೆ ಹಳೆಯ ವರ್ಷಕ್ಕೆ ಬೀಳ್ಕೊಡುವುದರ ಜೊತೆಗೆ ಈ ಎಂಟು ದೋಷಗಳಿಗೂ ಚೆನ್ನಾಗಿ ಬೀಳ್ಕೊಡಿರಿ. ತಿಳಿಯಿತೇ? ಬೀಳ್ಕೊಡಿಗೆ ಕೊಡಬಲ್ಲಿರಾ? ಬೀಳ್ಕೊಡುವ ಧೈರ್ಯವಿದೆಯೇ? ಆಗಲಿ ಬಾಬಾ ಎಂದು ಬೇಗನೆ ಹೇಳುತ್ತೀರಿ. ಇದು ಬಾಪ್‌ದಾದಾರವರಿಗೆ ತುಂಬಾ ಇಷ್ಟವಾಗುತ್ತದೆ. ಹಾಗಾದರೆ ಬೀಳ್ಕೊಡಬಲ್ಲಿರಾ? ಅಥವಾ ಅಲ್ಪ ಸ್ವಲ್ಪ ಹಳೆಯ ವಸ್ತುಗಳಲ್ಲಿ ಮೋಜು ಅನುಭವವಾಗುತ್ತದೆಯೋ? ಈಗ ಹಳೆಯ ವರ್ಷವು ಇನ್ನು 5 ಸಾವಿರ ವರ್ಷಗಳವರಿಗೆ ಬೀಳ್ಕೊಡುಗೆ ತೆಗೆದುಕೊಳ್ಳುತ್ತದೆ. ಆದರೆ ನಿಮ್ಮ ಈ ಅತಿ ಸಣ್ಣದಾದ ಬ್ರಾಹ್ಮಣ ಜನ್ಮವು ಒಂದೇ ಜನ್ಮವಾಗಿದೆ. ಹೆಚ್ಚಿಗೆ ಇಲ್ಲ. ಒಂದೇ ಜನ್ಮವಾಗಿದೆ. ಅದರಲ್ಲಿಯೂ ನಾಳೆಯ ಭರವಸೆಯಿಲ್ಲ. ಹೀಗೆ ಹಳೆಯ ವರ್ಷವು ಐದು ಸಾವಿರ, ವರ್ಷಗಳವರೆಗೆ ಬೀಳ್ಕೊಡಿಗೆ ತೆಗೆದುಕೊಳ್ಳುತ್ತದೆ. ಆದ್ದರಿಂದ ನೀವು ಕನಿಷ್ಟಪಕ್ಷ ಒಂದು ಜನ್ಮದವರೆಗಾದರೂ ಈ ದೋಷಗಳಿಗೆ ಬೀಳ್ಕೊಡಿಗೆ ಕೊಡಿರಿ. ಬೀಳ್ಕೊಡಿಗೆ ಕೊಡಬಲ್ಲಿರಾ? ಆಗಲಿ ಬಾಬಾ ಎಂದೇನೋ ಹೇಳುತ್ತೀರಿ. ಆದರೆ ಯಾವ ಸಮಯದಲ್ಲಿ ಅವು ವಾಪಸ್ಸು ಬರುತ್ತವೆಯೋ ಆಗ ತುಂಬಾ ಕಷ್ಟವಿದೆ ಏನು ಮಾಡುವುದು ಎಂದು ಯೋಚಿಸುತ್ತೀರಿ. ಬಿಟ್ಟು ಹೋಗುವುದಿಲ್ಲ ಎಂದು ತಿಳಿದುಕೊಳ್ಳುತ್ತೀರಿ. ನೀವು ಬಿಟ್ಟರೆ ಅವು ಬಿಟ್ಟುಹೋಗುವುವು' (ಛೋಡೋ ತೋ ಛೋಟೇಗಾ). ಅವು ಬಿಟ್ಟು ಹೋಗುವುದಿಲ್ಲ. ನೀವು ಬಿಟ್ಟರೆ, ಬಿಟ್ಟು ಹೋಗುವುವು. ಏಕೆಂದರೆ ನೀವು ಅವುಗಳೊಂದಿಗೆ ತುಂಬಾ ಪ್ರೀತಿ ಮಾಡಿದ್ದೀರಿ. ಆದ್ದರಿಂದ ಅವು ಬಿಡುವುದಿಲ್ಲ. ನೀವು ಬಿಡಬೇಕಾಗುತ್ತದೆ. ಆದ್ದರಿಂದ ಹಳೆಯ ವರ್ಷಕ್ಕೆ ಈ ವಿಧಿಯಿಂದ ಅರ್ಥಾತ್ ದೃಢ ಸಂಕಲ್ಪ ಹಾಗೂ ಸಂಪೂರ್ಣ ನಿಶ್ಚಯದ ಈ ಟ್ರೇಯಲ್ಲಿ ಎಂಟು ವಿಷಯಗಳನ್ನು ಅಲಂಕರಿಸಿ ಜೋಡಿಸಿ ಅದಕ್ಕೆ ಬೀಳ್ಕೊಡುಗೆ

ಕೊಟ್ಟುಬಿಟ್ಟರೆ  ಅವು ಪುನಃ ವಾಪಸ್ಸು ಬರುವುದಿಲ್ಲ. ನಿಶ್ಚಯವನ್ನು ಅಲುಗಾಡಲು ಬಿಡಬೇಡಿರಿ. ನಿಶ್ಚಯವು ಅಲುಗಾಡಿ ಬಿಡುತ್ತದೆ – ಏನಾಯಿತು, ಆಗಿಬಿಡುವುದು, ಇನ್ನೂ ಎರಡು ಸಾವಿರ ವರ್ಷ ಪೂರ್ತಿಯಾಗಿಲ್ಲ, ಎರಡು ಸಾವಿರದ ಇಸವಿಯ ಹೊತ್ತಿಗೆ ಸರಿಯಾಗಿ ಬಿಡುವುದು, ಹೀಗೆ ತಿಳಿದುಕೊಳ್ಳುವುದು ಅಥವಾ ಹೇಳುವುದು ನಿಶ್ಚಯದಲ್ಲಿ ಹುಡುಗಾಟಿಕೆ(ಸೋಮಾರಿತನ)ಯಾಗಿದೆ. ಬಾಪ್‌ದಾದಾರಿಗೂ ಸಹ ಮಕ್ಕಳು ತುಂಬಾ ಒಳ್ಳೆಯ ಮಾತುಗಳನ್ನು ಹೇಳುತ್ತಾರೆ ಬಾಬಾ ನೀವು ಚಿಂತೆ ಮಾಡಬೇಡಿರಿ. ಎರಡು ಸಾವಿರದ ಇಸವಿಯ ಹೊತ್ತಿಗೆ ಪೂರ್ತಿಯಾಗಿ ಬಿಡುವುದು. ಈಗ ಅಲ್ಪಸ್ವಲ್ಪ....ಆದರೆ ಎರಡು ಸಾವಿರದ ಇಸವಿಯ ತಾರೀಖನ್ನಂತೂ ತಂದೆಯು ಕೊಟ್ಟಿಲ್ಲ. ಆದ್ದರಿಂದ ನೀವು ಎರಡು ಸಾವಿರದ ಇಸವಿಯ ಪ್ರತೀಕ್ಷೆ ಮಾಡುತ್ತಾ ಇರುವುದು ಆದರೆ ಹೊಸ ಪ್ರಪಂಚದ ಆಗಮನವು ಅದಕ್ಕೆ ಮುಂಚಿತವಾಗಿಯೇ ಆಗಿಬಿಡುವಂತಾಗಬಾರದು. ಆದ್ದರಿಂದ ಸೋಮಾರಿಯಾಗಬೇಡಿರಿ. ರಿವೈಜ್(ಪುನರಾವರ್ತನೆ) ಮಾಡಿರಿ. ಪದೇ ಪದೇ ರಿವೈಜ್ ಮಾಡಿರಿ. ಏಕೆ ಮರೆತು ಬಿಡುತ್ತೀರಿ? ಯಾವಾಗ ಯಾವುದಾದರೂ ಕಾರ್ಯವನ್ನು ಪ್ರಾರಂಭ ಮಾಡುತ್ತೀರೋ ಆಗ ತುಂಬಾ ಚೆನ್ನಾಗಿ ವಿಚಾರ ಮಾಡುತ್ತೀರಿ. ಅತ್ಮನಾಗಿದ್ದೇನೆ,  ಆತ್ಮನಾಗಿದ್ದೇನೆ. ಇವರೂ ಸಹ ಆತ್ಮನಾಗಿದ್ದಾರೆ ಆತ್ಮವೇ ಶರೀರದಿಂದ ಈ ಕಾರ್ಯವನ್ನು ಮಾಡುತ್ತಾ ಇದೆ. ಹೀಗೆ ಪ್ರಾರಂಭ ಮಾಡುತ್ತೀರಿ. ಆದರೆ ಕಾರ್ಯವನ್ನು ಮಾಡುತ್ತಾ ಮಾಡುತ್ತಾ ಆತ್ಮವು ಗುಪ್ತವಾಗಿ ಬಿಡುತ್ತದೆ. ನೀವು ಏನು ಕಾರ್ಯ ಮಾಡುತ್ತೀರೋ ಅದರಲ್ಲಿ ಎಷ್ಟು ವ್ಯಸ್ತರಾಗಿ ಬಿಡುತ್ತೀರೆಂದರೆ ಕೈಯಿಂದ ಕೆಲಸ ಮಾಡಲೇಬೇಕಾಗುತ್ತದೆ. ಆದರೆ ಮನಸ್ಸು, ಬುದ್ಧಿ ಸಹಿತವಾಗಿ ನಿಮ್ಮನ್ನು ಅದರಲ್ಲಿ ಬಿಜಿ (ತತ್ಪರ) ಮಾಡಿಕೊಂಡು ಬಿಡುತ್ತೀರಿ. ಹೇಳಿದೆವಲ್ಲವೇ - ದೇಹಾಭಿಮಾನಿ ಕಡಿಮೆ ಆಗುತ್ತೀರಿ. ಆದರೆ ಅಧಿಕವಾಗಿ ಕರ್ಮಾಭಿಮಾನಿಯಾಗುತ್ತೀರಿ. ಆಮೇಲೆ ಏನು ಹೇಳುತ್ತೀರೆಂದರೆ - ಬಾಬಾ ನನ್ನಿಂದ ಯಾವ ತಪ್ಪೂ ಆಗಲಿಲ್ಲ. ನಾನು ಯಾರಿಗೂ ಏನೂ ಹೇಳಲಿಲ್ಲ ಎಂದು ಹೇಳುತ್ತೀರಿ. ಆದರೆ ನೀವು ದೇಹಾಭಿಮಾನಿ ಆಗಿಲ್ಲದಿರಬಹುದು. ಕರ್ಮಾಭಿಮಾನಿಯಾಗಿದ್ದರೆ ಹಾಗೂ ಆ ಸಮಯದಲ್ಲಿ ಏನಾದರೂ ಆಗಿಬಿಟ್ಟರೆ ಪರಿಣಾಮವು ಏನಾಗುವುದು? ಕಾರ್ಯದ ಸ್ಮೃತಿಯ ಫಲಿತಾಂಶವು ಆತ್ಮಾಭಿಮಾನದ ಫಲಿತಾಂಶದಂತೆ ಆಗುವುದಿಲ್ಲ. ಆದ್ದರಿಂದ ಇದರ ವಿಧಿಯು ಏನಾಗಿದೆಯೆಂದರೆ ಪದೇ ಪದೇ ರಿವೈಜ್ ಮಾಡಿರಿ (ಸ್ಮೃತಿಯಲ್ಲಿ ತಂದುಕೊಳ್ಳಿರಿ). ಪದೇ ಪದೇ ಚೆಕ್ (ಪರಿಶೀಲನೆ) ಮಾಡಿಕೊಳ್ಳಿರಿ. ಯಾವಾಗ ಕಾರ್ಯವು ಪೂರ್ತಿಯಾಗುತ್ತದೆಯೋ ಆಮೇಲೆ ನೀವು ಯೋಚಿಸುತ್ತೀರಿ. ಆದರೆ ಹಾಗೆ ಮಾಡಬೇಡಿರಿ. ಸ್ವಾಭಾವಿಕವಾಗಿ ಆತ್ಮಾಭಿಮಾನಿಯಾಗುವವರೆಗೆ ಪದೇ ಪದೇ ರಿವೈಜ್ ಮಾಡುವುದೇ ಸಹಜವಾದ ವಿಧಿಯಾಗಿದೆ. ರಿವೈಜ್ ಮಾಡುವ ಸಲುವಾಗಿ ಸಮಯವು ದೊರೆಯುತ್ತದೆಯೋ ಅಥವಾ ತುಂಬಾ ಬಿಡುವಿದೆಯೇ? ಪುನಃ ಪುನಃ ಬಿಜಿಯಾಗಿರುತ್ತೀರೋ? ಸ್ಮೃತಿಯಲ್ಲಿ ತಂದುಕೊಳ್ಳುವುದರಿಂದ ಕೊನೆಯಲ್ಲಿ ಏನು ಯೋಚನೆ ಮಾಡಬೇಕಾಗುತ್ತದೆಯೋ ಅದರ ಅಗತ್ಯವಿರುವುದಿಲ್ಲ. ಹಾಗೂ ಯಾವಾಗಲಾದರೂ ನಿಮ್ಮ ಚಾರ್ಟ್ ಪರಿಶೀಲನೆ ಮಾಡಿಕೊಂಡರೆ ಎರಡು ಅಂಶಗಳನ್ನು ಪರಿಶೀಲನೆ ಮಾಡಿಕೊಳ್ಳಿರಿ. ನಾನು ದುಷ್ಕರ್ಮವನ್ನು ಮಾಡಲಿಲ್ಲ ಅರ್ಥಾತ್ ಏನೂ ಕಳೆದುಕೊಳ್ಳಲಿಲ್ಲ. ಅದೇನೋ ಸರಿಯಾಯಿತು, ಆದರೆ ಎಷ್ಟು ಜಮಾ ಮಾಡಿಕೊಂಡಿದ್ದೀರಿ? ಏನೂ ಕಳೆದುಕೊಳ್ಳಲಿಲ್ಲ. ಅದಕ್ಕೆ ಅಭಿನಂದನೆಗಳು. ಆದರೆ ಕಳೆದುಕೊಳ್ಳಲೂ ಇಲ್ಲ ಹಾಗೂ ಸಂಪಾದನೆಯನ್ನೂ ಮಾಡಿಕೊಳ್ಳದಿದ್ದರೆ ಅಂತಹವರು ಯಾವ ಪಟ್ಟಿಯಲ್ಲಿ ಬರುವರು? ಆದ್ದರಿಂದ ಏನು ಚೆಕ್ ಮಾಡಿಕೊಳ್ಳಿರೆಂದರೆ, ನಾನು ಎಷ್ಟು ಜಮಾ ಮಾಡಿಕೊಂಡೆನು ಎಂಬ ಜಮಾದ ಖಾತೆಯನ್ನು ಚೆಕ್ ಮಾಡಿಕೊಳ್ಳಿರಿ.

ಏಕೆಂದರೆ ನೀವು ಇಡೀ ಕಲ್ಪದಲ್ಲಿ ರಾಜ್ಯಭಾರ ಮಾಡಬಹುದು ಅಥವಾ ಪೂಜಿಸಲ್ಪಡಬಹುದು. ಆದರೆ ಅದರ ಸಲುವಾಗಿ ಸಂಪಾದನೆಯನ್ನು ಎಲ್ಲಿ ಮಾಡಿಕೊಳ್ಳಬೇಕು? ಈಗಲೇ ಜಮಾ ಮಾಡಿಕೊಳ್ಳಬೇಕಲ್ಲವೇ? ಅಥವಾ ದ್ವಾಪರ ಯುಗದಲ್ಲಿ ಮಾಡಿಕೊಳ್ಳುವಿರೋ? ಸತ್ಯಯುಗದಲ್ಲಿ ಮಾಡಿಕೊಳ್ಳುವಿರಾ? ಜಮಾ ಮಾಡಿಕೊಳ್ಳುವುದಂತೂ ಈಗಲೇ ಮಾಡಿಕೊಳ್ಳಬೇಕಲ್ಲವೇ. ಆದ್ದರಿಂದ ನಾನು ಎಷ್ಟು ಜಮಾ ಮಾಡಿಕೊಂಡೆನು ಎಂಬುದನ್ನು ಚೆಕ್ ಮಾಡಿಕೊಳ್ಳಿರಿ. ಕನಿಷ್ಠಪಕ್ಷ ಎಷ್ಟು ಜಮಾ ಮಾಡಿಕೊಳ್ಳಬೇಕೆಂದರೆ, ಮುಂದೆ 21 ಜನ್ಮಗಳಲ್ಲಿ ರಾಜಕುಲದಲ್ಲಿ ಪ್ರಾಲಬ್ಧವನ್ನು ಭೋಗಿಸುತ್ತಾ ಇರುವಂತೆ. ಒಂದುವೇಳೆ ಕಡಿಮೆ ಜಮಾ ಆದರೆ ತ್ರೇತಾದಲ್ಲಿ ಬರುವಿರಿ. ಸತ್ಯಯುಗದ ಸುಖವು ಕೈ ತಪ್ಪಿಹೋಗುವುದು. ಇದು ಇಷ್ಟವಿದೆಯೇ? ತ್ರೇತಾದಲ್ಲಿ ಬರುವುದು ನಿಮಗೆ ಇಷ್ಟವಿದೆಯೇ? ಮೊಟ್ಟಮೊದಲನೆಯ ಸುಖವೆಲ್ಲವನ್ನೂ ಸೂರ್ಯವಂಶಿಯರು ತೆಗೆದುಕೊಂಡು ಬಿಡುವರು. ಆಮೇಲೆ ಏನು ಉಳಿದಿರುತ್ತದೆಯೋ ಅದು ಚಂದ್ರವಂಶೀಯರಿಗೆ ದೊರೆಯುವುದು. ಆದ್ದರಿಂದ ಜಮಾ ಮಾಡಿಕೊಂಡಿರುವ ಖಾತೆಯನ್ನು ಚೆಕ್ ಮಾಡಿಕೊಳ್ಳಿರಿ. ಇಡೀ ದಿನದಲ್ಲಿ ಹೆಚ್ಚು ಹೆಚ್ಚು ಜಮಾ ಆದರೆ ಸಹಜವಾಗಿಯೇ ನೀವು ನಿರ್ವಿಘ್ನ ಆಗಿಯೇ ಬಿಡುವಿರಿ ಹಾಗೂ ಸೂಕ್ಷ್ಮದೇವತಾ ರೂಪದಲ್ಲಿ ಸ್ಥಿತರಾಗಿಬಿಡುವಿರಿ. ಆದ್ದರಿಂದ ವಿಧಿಯು ಯಾವುದಾಯಿತು? ರಿವೈಜ್ ಮಾಡಿರಿ. ಪ್ರತಿಯೊಂದು ಗಂಟೆಗೂ ರಿವೈಜ್ ಮಾಡಿರಿ. ಯಾವ ಕಾನ್‌ಷಿಯಸ್ (ಅಭಿಮಾನಿ ಅಥವಾ ಸ್ಮೃತಿಸ್ವರೂಪ) ಆಗಬೇಕು? ಮಾಡಬಲ್ಲಿರಾ? ಸಾಧ್ಯವಾಗುತ್ತದೆಯೇ?

ಬಾಪ್‌ದಾದಾರವರು ಎಲ್ಲರ ಪಾತ್ರವನ್ನು ಚೆಕ್ ಮಾಡಿದಾಗ ಒಟ್ಟಾರೆ 50 ಪ್ರತಿಶತ ಮಕ್ಕಳು ಅನ್ಯರನ್ನು ನೋಡಿ ಸ್ವಯಂ ಅಜಾಗರೂಕರಾಗಿದ್ದಾರೆ (ಹುಡುಗಾಟಿಕೆಯಲ್ಲಿದ್ದಾರೆ/ಸೋಮಾರಿತನ) ಒಮ್ಮೊಮ್ಮೆ ಒಳ್ಳೊಳ್ಳೆಯ ಮಕ್ಕಳೂ ಸಹ ಹುಡುಗಾಟಿಕೆಯಲ್ಲಿ ತುಂಬಾ ಬಂದುಬಿಡುತ್ತಾರೆ. ಇದಂತೂ ಇದ್ದೇ ಇರುತ್ತದೆ, ಇದಂತೂ ನಡೆದೇ ನಡೆಯುತ್ತದೆ ನಡೆಯಲಿ ಬಿಡಿ, ಎಲ್ಲರೂ ನಡೆಯುತ್ತಾರೆ, ಬಾಪ್‌ದಾದಾರಿಗೆ ನಗು ಬರುತ್ತದೆ. ಒಬ್ಬರು ಮೋಸಕ್ಕೊಳಗಾದರೆ ಅದನ್ನು ನೋಡಿ ಅಜಾತರೂಕತೆ(ನಿರ್ಲಕ್ಷ್ಯ) ಅಥವಾ ಸೋಮಾರಿತನದಿಂದ ಮೋಸ ಹೋದರೆ ನೀವು ತಿಳುವಳಿಕೆಯುಳ್ಳವರೇ? ಈ ಸೋಮಾರಿತನ ಅಥವಾ ನಿರ್ಲಕ್ಷ್ಯದ ಪಶ್ಚಾತಾಪವೂ ಬಹಳ ದೊಡ್ಡದಾಗಿ ಇರುತ್ತದೆ. ಅಪರಾಧವೆನಿಸುವುದಿಲ್ಲ. ನಡೆಯಲಿ ಬಿಡು... ಆದರೆ ಬಾಪ್‌ದಾದಾ ಎಲ್ಲವನ್ನೂ ನೋಡುತ್ತಿದ್ದಾರೆ ಎಷ್ಟು ಸೋಮಾರಿಯಾಗಿ ಇರುತ್ತಿದ್ದಾರೆ, ಹೀಗೆ ಇತರರನ್ನು ಕೆಳಗೆ ಬೀಳಲು ಅನುಸರಿಸುತ್ತಿದ್ದಾರೆ! ಎಂದು. ಬಾಪ್‌ದಾದಾರವರಿಗಂತೂ ದಯೆ ಬರುತ್ತದೆ ಪಶ್ಚಾತಾಪದ. ಕ್ಷಣಗಳು ಎಷ್ಟೋ ಕಠಿಣವಾಗಿ ಇರುತ್ತವೆ ಎಂದು. ಆದ್ದರಿಂದ ಸೋಮಾರಿತನಕ್ಕೆ ಮತ್ತು ಇತರರನ್ನು ನೋಡುವ ಅಲೆಗೆ ಈ ಹಳೆಯ ವರ್ಷದಲ್ಲಿ ಮನಸ್ಸಿನಿಂದ ಬೀಳ್ಕೊಡುಗೆಯನ್ನು ಕೊಡಿ. ಯಾವಾಗ ಸ್ವಲ್ಪ ಉತ್ಸಾಹ ಉಲ್ಲಾಸವು ಬರುತ್ತದೆಯೋ ಆಗ ಸ್ವಲ್ಪ ಸಮಯದವರೆಗೆ ವೈರಾಗ್ಯವು ಬರುತ್ತದೆ. ಆದರೆ ಆದು ಅಲ್ಪಕಾಲದ ವೈರಾಗ್ಯವಾಗಿರುತ್ತದೆ. ಆದ್ದರಿಂದ ಬಾಪ್‌ದಾದಾರು ಏನು ಮುಕ್ತರಾಗಬೇಕೆನ್ನುವ ಲೋಪದೋಷಗಳನ್ನು ತಿಳಿಸಿಕೊಟ್ಟಿದ್ದೇವೋ ಅದರ ಬಗ್ಗೆ ತುಂಬಾ ಗಮನವನ್ನು ಕೊಡಿ. ಎಷ್ಟು ಹಳಬರಾಗುತ್ತಾರೋ ಅಷ್ಟು ಹಳಬರಾದಂತೆ ಸೋಮಾರಿತನ ಅಧಿಕ ಪ್ರಮಾಣದಲ್ಲಿ ಬರುವುದನ್ನು ನೋಡಲಾಗಿದೆ. ಎಲ್ಲವನ್ನೂ ಕೇಳಿಬಿಟ್ಟೆನು, ತಿಳಿದುಕೊಂಡು ಬಿಟ್ಟೆನು ಎಂಬ ಹುಡುಗಾಟಿಕೆಯು ಬರುತ್ತದೆ. ಏನು ಮೊಟ್ಟಮೊದಲಿನ ಉಲ್ಲಾಸ,

ಆವೇಶವಿರುತ್ತದೆಯೋ ಅದು ಹಳಬರಾದಾಗ ಇರುವುದಿಲ್ಲ. ಜ್ಞಾನದ ಅಧ್ಯಯನದಲ್ಲಿಯೂ ಹುಡುಗಾಟಿಕೆಯು ಬಂದುಬಿಡುತ್ತದೆ. ಒಂದುವೇಳೆ ಎಲ್ಲವನ್ನೂ ತಿಳಿದುಕೊಂಡುಬಿಟ್ಟಿದ್ದರೆ, ಈ ರೀತಿ ವಿಚಾರ ಮಾಡಿದರೆ ಬಾಪ್‌ದಾದಾರು ಜ್ಞಾನವನ್ನು ನೀಡುವುದನ್ನು ಪೂರ್ತಿ ಮಾಡಿಬಿಡುತ್ತೇವೆ. ಯಾವಾಗ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಗಿಸಿಬಿಟ್ಟಿದ್ದೀರೋ ಆಗ ಶಿಕ್ಷಣವನ್ನು ಏಕೆ ನೀಡಬೇಕು? ಹಾಗಾದರೆ ಸಮಾಪ್ತಿ ಮಾಡಿಬಿಡಬೇಕಲ್ಲವೇ. ಆದರೆ ಈ ಸೋಮಾರಿತನಕ್ಕೆ ಚೆನ್ನಾಗಿ ಬೀಳ್ಕೊಡಿರಿ. ಅನ್ಯರನ್ನು ನೋಡಬೇಡಿರಿ. ತಂದೆಯನ್ನು ನೋಡಿರಿ, ಬ್ರಹ್ಮಾತಂದೆಯನ್ನು ನೋಡಿರಿ, ಒಂದು ವೇಳೆ ಯಾರಾದರೂ ಮೋಸ ಹೋಗುತ್ತಿದ್ದರೆ ಮಹಾರಾಥಿಗಳ ಕಾರ್ಯ ಮೋಸದಿಂದ ಅವರನ್ನು ರಕ್ಷಿಸುವುದು, ಅಷ್ಟೇ ಹೊರತು ಸ್ವಯಂ ಅನ್ನು ಅನುಸರಿಸುವುದು ಅಲ್ಲ. ಹಳೆಯ ವರ್ಷಕ್ಕೆ ಚೆನ್ನಾಗಿ ಬೀಳ್ಕೊಡುಗೆ ಕೊಟ್ಟಿದ್ದೀರಲ್ಲವೇ? ಈಗ ಎಷ್ಟು ಸಮಯವಾಗಿದೆ 9:45 ಈಗ ಇನ್ನೂ ಎರಡು ಗಂಟೆಗಳು ಬಾಕಿ ಇದೆ. ಎರಡು ಗಂಟೆಗಳಲ್ಲಿ ಬಿಳ್ಕೊಡುಗೆಯ ಸಾಮಾನುಗಳನ್ನು ತಯಾರು ಮಾಡಿರಿ. ಬಾಪ್‌ದಾದಾ ನೋಡುತ್ತಾರೆ. ಬಾಬಾಗೆ ಉಡುಗೊರೆ ಕೊಡುವುದರಲ್ಲಿ ಹೆಚ್ಚಿನ ನಂಬರ್ ಡಬಲ್ ವಿದೇಶಿಯರು ತೆಗೆದುಕೊಳ್ಳುತ್ತಾರೆಯೇ ಅಥವಾ ಭಾರತವಾಸಿಯರು ಪಡೆಯುತ್ತಾರೆಯೇ ಎಂದು. ಇಬ್ಬರೂ ಪಡೆಯುತ್ತೀರಲ್ಲವೇ? ಹೌದೋ ಅಥವಾ ಇಲ್ಲವೋ ಹೇಳಿರಿ.

**ನಾಲ್ಕೂ ಕಡೆಯ ಪ್ರಕಾಶಿಸುತ್ತಿರುವ ಸತ್ಯವಾದ ವಜ್ರಗಳಿಗೆ ಸದಾ ನಿಶ್ಚಯ ಹಾಗೂ ದೃಢ ಸಂಕಲ್ಪದ ಮೂಲಕ ಸ್ವಯಂ ನಿಮ್ಮನ್ನು ಸತ್ಯವಾದ ವಜ್ರವನ್ನಾಗಿ ಮಾಡಿಕೊಂಡು ಅನ್ಯರನ್ನೂ ಮಾಡುವವರಿಗೆ, ಸದಾ ಬಾಪ್ ದಾದಾರವ ಸಮಾನ ಡಬ್ಬಲ್ ಲೈಟ್ ಫರಿಸ್ತಾ ಸ್ವರೂಪದಲ್ಲಿ ಸ್ಥಿತರಾಗುವ ಶ್ರೇಷ್ಠ ಆತ್ಮರಿಗೆ, ಸದಾ ತಂದೆ ಹಾಗೂ ಸೇವೆ ಇವೆರಡರಲ್ಲಿ ಬಿಜಿಯಾಗಿರುವ ಮಾಯಾಜೀತರಾಗಿ ವಿಶ್ವದ ರಾಜ್ಯಭಾಗ್ಯವನ್ನು ಪಡೆಯುವ ಸಂಗಮಯುಗದ ಡೈಮಂಡ್ ಗಳಿಗೆ (ವಜ್ರಗಳಿಗೆ), ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

ಒಳ್ಳೆಯದು ಡಬಲ್ ವಿದೇಶೀಯರು ಎಷ್ಟು ದೇಶಗಳಿಂದ ಬಂದಿದ್ದಾರೆ? (36) ಹಾಗೂ ಭಾರತದ ಎಷ್ಟು ಜೋನ್ನನವರು ಬಂದಿದ್ದಾರೆ? (5) ಭಾರತೀಯರು 5 ಜೋನ್‌ಗಳಿಂದ ಬಂದಿದ್ದಾರೆ ಹಾಗೂ ಡಬ್ಬಲ್ ವಿದೇಶೀಯರು 36 ದೇಶಗಳಿಂದ ಬಂದಿದ್ದಾರೆ. ಡಬಲ್ ವಿದೇಶೀಯರು ಸದಾ ಬಾಪ್‌ದಾದಾರನ್ನು ನಿಮ್ಮ ಸಾಥಿಯೆಂದು ತಿಳಿದುಕೊಂಡು ಜೊತೆಯಲ್ಲಿ ಇರುತ್ತೀರಲ್ಲವೇ. ಎಷ್ಟು ವಿದೇಶ ಎನ್ನುವ ಹೆಸರಿದೆಯೋ ಅಷ್ಟೇ ತಂದೆಯ ಜೊತೆಯನ್ನು ಸಮೀಪದ್ದಾಗಿ ಅನುಭವ ಮಾಡುತ್ತೀರಾ? ಏಕೆಂದರೆ ಎಲ್ಲಿಯವರೆಗೆ ತಂದೆಯು ಜೊತೆಯಲ್ಲಿದ್ದೇನೋ ಆಗ ಮಾಯೆಯೂ ಸಹ ತಂದೆಯ ಜೊತೆಯಿರುವುದನ್ನು ನೋಡಿ ದೂರದಿಂದಲೇ ಓಡಿ ಹೋಗುತ್ತದೆ. ಒಂಟಿಯಾದರೆ ಮಾಯೆಗೆ ಅವಕಾಶವು ದೊರೆಯುತ್ತದೆ. ಜೊತೆಯಾಗಿರದಿದ್ದರೆ ಮಾಯೆಗೆ ಅವಕಾಶವು ದೊರೆಯುವ ಸಂಭವವಿರುವುದಿಲ್ಲ. ಹಾಗೂ ಯಾವಾಗ ತಂದೆಯು ಸ್ವಯಂ ನಾನು ಮಕ್ಕಳ ಸಾಥಿಯಾಗಿದ್ದೇನೆಂದು ಜೊತೆಯನ್ನು ಕೊಡುತ್ತೇನೋ ಆಗ ಈ ಭಗವಂತನ ಜೊತೆಯ ಅವಕಾಶವು ಇಡೀ ಕಲ್ಪದಲ್ಲಿ ಪುನಃ ದೊರೆಯುತ್ತದೆಯೇ? ಹೇಗೆ ಜೊತೆಯಲ್ಲಿ ಇರಿ ಎನ್ನುವುದು ಸ್ವಯಂ ತಂದೆಯು ನೀಡುವ ವಾಗ್ದಾನವಾಗಿದೆ. ಯಾವುದಾದರೂ ಕಷ್ಟವಾದ ಸಮಸ್ಯೆಯು ತಂದೆಯ ಜೊತೆಯಿಂದ ಸಹಜವಾಗಿ ಬಿಡುತ್ತದೆ. ಹೀಗೆ ಜೊತೆಯ ಅನುಭವ

ಆಗುತ್ತದೆಯೇ? ಡಬಲ್ ವಿದೇಶೀಯರು ಬ್ರಾಹ್ಮಣ ಪರಿವಾರದ ವಿಶೇಷ ಶೃಂಗಾರವಾಗಿದ್ದಾರೆ. ಹೇಗೆ ಈದಿನ ವಿಶೇಷ ಶೃಂಗಾರ ಮಾಡಿದ್ದೀರಲ್ಲವೇ. ಚೆನ್ನಾಗಿದೆ ಎನಿಸುತ್ತದೆಯಲ್ಲವೇ. ಹಾಗೆಯೇ ನೀವು ಸಹ ಒಂದೊಂದು ರತ್ನವೂ ಬ್ರಾಹ್ಮಣ ಪರಿವಾರದ ಶೃಂಗಾರವಾಗಿದ್ದೀರಿ. ಶೃಂಗಾರವು ಎಂದೂ ಬಿದ್ದುಹೋಗಬಾರದು. ಶೃಂಗಾರವು ಬಿದ್ದುಹೋದರೆ ಏನು ಅನ್ನಿಸುತ್ತದೆ? ಚೆನ್ನಾಗಿದೆಯೆನಿಸುತ್ತದೆಯೇ? ನಾವು ಬ್ರಾಹ್ಮಣ ಪರಿವಾರದ ಕಿರೀಟದ ವಜ್ರಗಳಾಗಿದ್ದೇವೆಂದು ಸದಾ ತಿಳಿದುಕೊಳ್ಳಿರಿ. ಒಂದುವೇಳೆ ಕಿರೀಟದಿಂದ ಒಂದು ವಜ್ರವು ಬಿದ್ದು ಹೋದರೂ ಹೇಗೆ ಅನ್ನಿಸುತ್ತದೆ? ಚೆನ್ನಾಗಿ ಕಾಣುತ್ತದೆಯೇ? ಆದ್ದರಿಂದ ನಿಮ್ಮ ಮಹತ್ವವು ಇಷ್ಟೊಂದು ಇದೆಯೆಂದು ತಿಳಿದುಕೊಳ್ಳಿರಿ. ನಾವು ಸಾಧಾರಣರಲ್ಲ ಎಂದು ತಿಳಿದುಕೊಳ್ಳಿರಿ. ಶ್ರೇಷ್ಠರಾಗಿದ್ದೀರಿ. ಡಬ್ಬಲ್ ವಿದೇಶೀಯರು ಹೀಗೆ ತಿಳಿದುಕೊಂಡಿದ್ದೀರಲ್ಲವೇ. ಇಷ್ಟು ಮಹಾನ್ ಆಗಿದ್ದೀರಲ್ಲವೇ?

ಒಳ್ಳೆಯದು. ಸೇವೆಯ ಸಮಾಚಾರವು ಸಹ ನಾಲ್ಕೂ ಕಡೆಯದು ಚೆನ್ನಾಗಿ ಬರುತ್ತಿರುತ್ತದೆ. ಭಾರತದ ತನ್ನ ಪ್ರೋಗ್ರಾಮ್ ಇದೆ. ವಿದೇಶಗಳದು ತಮ್ಮ ಪ್ರೋಗ್ರಾಂಗಳಿವೆ. ಸೇವೆಯಲ್ಲಿ ತಮ್ಮನ್ನು ಬಿಜಿಯಾಗಿ (ವ್ಯಸ್ತರಾಗಿ) ಇಟ್ಟುಕೊಳ್ಳುತ್ತಾರೆ. ಹಾಗೂ ಸದಾ ಇಟ್ಟುಕೊಳ್ಳಿರಿ. ಸೇವೆಯು ಸುರಕ್ಷತೆಯ ಸಾಧನವಾಗಿದೆ. ಎಷ್ಟು ನಿಮ್ಮನ್ನು ಬಿಜಿಯಾಗಿ ಇಟ್ಟುಕೊಳ್ಳುವಿರೋ ಅಷ್ಟು ಸುರಕ್ಷಿತರಾಗಿರುವಿರಿ. ತಿಳಿಯಿತೇ?

ವಿದೇಶದಿಂದ ಸಿಂಧೀ ಸೋದರ ಸೋದರಿಯರ ತಂಡವು ಬಂದಿದೆ. ಒಳ್ಳೆಯದು, ಈ ತಂಡವನ್ನು ಕರೆತಂದಿದ್ದೀಯೇ. ಯಾರು ಕವಿತಾಳ ಜೊತೆಯಲ್ಲಿ ಬಂದಿದ್ದೀರೋ ಅವರು ಕೈ ಎತ್ತಿರಿ. (ಬಾಪ್ ದಾದಾರು ಎಲ್ಲರನ್ನೂ ಕರೆದು ಮುಂದೆ ಕೂಡಿಸಿಕೊಂಡರು) ಈಗ ಗುಲ್‌ದಸ್ತಾ (ಪುಷ್ಪಗುಚ್ಛ) ಎನಿಸುತ್ತದೆ. ಇಷ್ಟು ದೊಡ್ಡ ಬ್ರಾಹ್ಮಣ ಪರಿವಾರವನ್ನು ನೋಡಿ ಖುಷಿಯಾಗುತ್ತದೆಯೇ? ನಿಮ್ಮ ಪರಿವಾರದಲ್ಲಿ ಎಷ್ಟೊಂದು ಇದ್ದಾರೆ ನೋಡಿರಿ. ಹಾಗೂ ಇಡೀ ಪರಿವಾರವು ಆರಿಸಿಕೊಳ್ಳಲ್ಪಟ್ಟಿರುವ ಶ್ರೇಷ್ಠ ಆತ್ಮರದಾಗಿದೆ. ಆದ್ದರಿಂದ ಭಾರತೀಯರು ನಿಮ್ಮನ್ನು ನೋಡಿ ಖುಷಿಯಾಗುತ್ತಾರೆ. ಏಕೆಂದರೆ ವಿಶೇಷವಾಗಿ ಯಾರು ಪ್ರತಿಕೂಲವಾಗಿದ್ದೀರೋ ಅವರು ಅನುಕೂಲ ಆಗಿಬಿಟ್ಟರಿ. ಸಿಂಧ್‌ನಲ್ಲಿ ಚಿಕ್ಕಪ್ಪ, ಸೋದರಮಾವ .... ಮುಂತಾದ ಆ ದೇಹದ ಸಂಬಂಧಿಗಳ ಪರಿವಾರದಿಂದ ಹೊರಗೆ ಬಂದಿದ್ದೀರಿ. ಆದ್ದರಿಂದ ಎಷ್ಟು ಅದೃಷ್ಟಶಾಲಿಗಳಾಗಿದ್ದೀರಿ. ಅದೃಷ್ಟಶಾಲಿಗಳಾಗಿದ್ದೀರಲ್ಲವೇ. ಸಿಂಧೀ ಜನರು ತುಂಬಾ ವಿರುದ್ಧ ಆಗಿದ್ದರಲ್ಲವೇ. ಈಗ ಸಮೀಪದಲ್ಲಿ ಬಂದಿದ್ದಾರೆ. ಆದ್ದರಿಂದ ಈ ತಂಡವನ್ನು ಸಮೀಪದಲ್ಲಿ ಕೂಡಿಸಿಕೊಂಡಿದ್ದೇವೆ. ಎಲ್ಲರೂ ಖುಷಿಯಾಗಿದ್ದೀರಾ? ನಿಮ್ಮ ತಂಡದವರೆಲ್ಲರೂ ಖುಷಿಯಾಗಿದ್ದಾರೆಯೇ? ಒಳ್ಳೆಯದು.

ಎಲ್ಲಾ ಡಬಲ್ ವಿದೇಶೀಯರೂ ಸದಾ ತಂದೆಯ ಸಾಥಿಯಾಗಿದ್ದಾರೆ. ಆದ್ದರಿಂದ ಸಾಥಿಯ ಸ್ಥಾನ ಯಾವುದಾಗಿದೆ. ಸಾಥಿಯು ಎಲ್ಲಿ ಇರುತ್ತಾರೆ? ಹೃದಯ ಸಿಂಹಾಸನದ ಮೇಲೆ. ಹಾಗಾದರೆ ಹೃದಯ ಸಿಂಹಾಸನದ ಮೇಲೆ ಇರುತ್ತೀರೋ ಅಥವಾ ಆಗಾಗ್ಗೆ ಇಳಿದು ಬರುತ್ತೀರೋ? ಸದಾ ನಿಮ್ಮನ್ನು ತಂದೆಯ ಸಾಥಿಯಾಗಿದ್ದೇವೆಂದು ತಿಳಿದುಕೊಳ್ಳಿರಿ. ಸಿಂಹಾಸನಾಧಿಕಾರಿಯಾಗಿದ್ದೇವೆ. ಸಿಂಹಾಸನದ ಮೇಲೆ ಅಧಿಕಾರವಿದೆ ಎಂದು ತಿಳಿದುಕೊಳ್ಳಿರಿ. ಯಾರು ಸಾಥಿಯಾಗಿರುತ್ತಾರೋ ಅವರಿಗೆ ಅಧಿಕಾರವಿರುತ್ತದೆ. ರಾಜನು ಸಿಂಹಾಸನದ ಮೇಲೆ ಕುಳಿತುಕೊಂಡರೆ ರಾಣಿಯೂ ಸಹ

ಅದರ ಮೇಲೆ ಕುಳಿತುಕೊಳ್ಳಲು ಅಧಿಕಾರಿಯಾಗಿರುತ್ತಾಳೆ. ಏಕೆಂದರೆ ಸಾಥಿಯಾಗಿದ್ದಾಳೆ. ಹಾಗೆಯೇ ನೀವೆಲ್ಲರೂ ಸಾಥಿಯಾಗಿದ್ದೀರಲ್ಲವೇ? ಡಬಲ್ ವಿದೇಶೀಯರೆಲ್ಲರೂ ಸಾಥಿಯಾಗಿದ್ದೀರಿ. ಆದ್ದರಿಂದ ತಂದೆಯ ಹೃದಯ ಸಿಂಹಾಸನವು ನಿಮ್ಮ ಸಂಗಮಯುಗದ ಅಧಿಕಾರವಾಗಿದೆ. ಇದರ ಅರ್ಥವು ಭಾರತೀಯರು ಅಧಿಕಾರಿಯಲ್ಲವೆಂದು ತಿಳಿದುಕೊಳ್ಳಬೇಡಿರಿ. ಸಮಯಕ್ಕೆ  ಡಬಲ್ ವಿದೇಶೀಯರೊಂದಿಗೆ ಮಾತನಾಡುತ್ತಿದ್ದೇವೆ ಆದ್ದರಿಂದ ಡಬ್ಬಲ್ ವಿದೇಶೀಯರೆಂದು ಹೇಳುತ್ತೇವೆ. ಆದರೆ ಯಾರು ಯಾರು ಸಾಥಿಯಾಗಿದ್ದಾರೋ ಅವರೆಲ್ಲರೂ ಅಧಿಕಾರಿಯಾಗಿದ್ದಾರೆ. ಮುಂತಾದುದನ್ನು ಲೆಕ್ಕಿಸದೆ ಓಡೋಡಿ ಎಷ್ಟಾದರೂ ಬಂದು ತಲುಪಿಬಿಡುತ್ತೀರಲ್ಲವೇ. ಆದ್ದರಿಂದ ಏನು ನೆನಪಿಟ್ಟುಕೊಳ್ಳುವಿರಿ? ಯಾರಾಗಿದ್ದೀರಿ? ಸಾಥಿಯಾಗಿದ್ದೀರಿ ಹಾಗೂ ಹೃದಯ ಸಿಂಹಾಸನಕ್ಕೆ ಅಧಿಕಾರಿಯಾಗಿದ್ದೀರಿ. ತಿಳಿಯಿತೇ?

ಒಳ್ಳೆಯದು, ಭಾರತೀಯರು ಕುಶಲವಾಗಿದ್ದೀರಾ? ಭಾರತೀಯರಿಗಂತೂ ಏನು ನಶೆಯಿದೆಯೆಂದರೆ, ಒಂದುವೇಳೆ ತಂದೆಯು ಭಾರತದಲ್ಲಿ ಬರದಿದ್ದರೆ, ವಿದೇಶೀಯರು ಎಲ್ಲಿಂದ ಬರುತ್ತಾರೆ ಎಂದು. ಏಕೆಂದರೆ ಬಾಪ್‌ದಾದಾರನ್ನು ಡ್ರಾಮಾದಲ್ಲಿ (ವಿಶ್ವನಾಟಕದಲ್ಲಿ) ಬಡವರ ಉದ್ಧಾರಕರೆಂದು ಕರೆಯಲಾಗುತ್ತದೆ. ವಿದೇಶಗಳೇನೂ ಬಡವರ ದೇಶಗಳಲ್ಲ. ಭಾರತವು ಬಡವರ ದೇಶವಾಗಿದೆ. ಹಾಗೂ ತಂದೆಗೆ ಬಡವರು ಇಷ್ಟರಾಗಿದ್ದಾರೆ. ಆದ್ದರಿಂದ ಬಡವರಲ್ಲಿ ಬಡವರ ದೇಶವಾಗಿರುವ ಭಾರತದಲ್ಲಿ ಬಂದಿದ್ದೇವೆ. ಲಂಡನ್ನಿನಲ್ಲಿ ಬರಲಿಲ್ಲ. ಆಮೇರಿಕಾದಲ್ಲಿಯೂ ಬರಲಿಲ್ಲ. ಭಾರತವು ಅವಿನಾಶಿಯಾಗಿದೆ. ಅವಿನಾಶೀ ಖಂಡವು ಎಷ್ಟಾದರೂ ಭಾರತವೇ ಆಗಿದೆ. ಈ ಅಮೇರಿಕಾ ಖಂಡವು ಈಗೀಗ ಜನರು ವಾಸ ಮಾಡುವ ಪ್ರದೇಶವಾಗಿದೆ. ಇನ್ನೇನು ವಿನಾಶವಾಗಿ ಬಿಡುವುದು. ತಂದೆಯು ಅವಿನಾಶಿಯಾಗಿದ್ದೇನಲ್ಲವೇ. ಆದ್ದರಿಂದ ಅವಿನಾಶೀ ಖಂಡದಲ್ಲಿಯೇ ಬರುತ್ತೇನೆ. ಭಾರತೀಯರಿಗೆ ನಶೆಯು ಸಹ ತುಂಬಾ ಇದೆ. ಭಾರತೀಯರಿಗೆ ಎಲ್ಲಕ್ಕಿಂತಲೂ ದೊಡ್ಡ ನಶೆಯು ಏನಿದೆಯೆಂದರೆ, ನಾವು ಭಗವಂತನನ್ನೂ ಸಹ ನಮ್ಮ ಪ್ರೀತಿಯ ಹಗ್ಗದಲ್ಲಿ ಬಂಧಿಸಿಬಿಟ್ಟಿದ್ದೇವೆ ಎಂದು. ನೋಡಿರಿ ಈಗಲೂ ಸಹ ಭಾರತದಲ್ಲಿ ಬರುತ್ತೇನಲ್ಲವೇ. ನಿಮ್ಮೆಲ್ಲರಿಗೂ ಮಿಲನ ಮಾಡಲು ಭಾರತಕ್ಕೇ ಬರಬೇಕಾಗುತ್ತದೆಯಲ್ಲವೇ? ಹೀಗೆ ಭಾರತವೂ ಸಹ ಕಡಿಮೆಯೇನಲ್ಲ ಹಾಗೂ ವಿದೇಶಗಳೂ ಕಡಿಮೆಯಲ್ಲ ಎರಡೂ ತಂದೆಗೆ ಪ್ರಿಯ ಆಗಿವೆ. ಪ್ರಿಯವಾದವಾಗಿವೆಯಲ್ಲವೇ? ಒಳ್ಳೆಯದು (ಸಿಂಧೀ ಸೋದರ ಸೋದರಿಯರೊಂದಿಗೆ) ಎಷ್ಟು ಮಂದಿ ಬಂದಿದ್ದೀರಿ? 70 ಮಂದಿ ಬಂದಿದ್ದಾರೆ. ಈಗ ಮಾಲೆಯನ್ನು ಪೂರ್ತಿಮಾಡಿ ಬರುತ್ತೀರಿ. ಕರೆತರುವುದರಲ್ಲಿ ಇವರು ಚತುರರಾಗಿದ್ದಾರೆ. ಎರಡು ಪ್ರಕಾರದವರು ಬಂದಿದ್ದಾರೆ. ಆದರೆ ಬರುತ್ತಾ ಬರುತ್ತಾ ಕೊನೆಯಲ್ಲಿ ಎಲ್ಲಿ ಹೋಗುವರು. ದೂರ ಮಾಡುವ ಪ್ರಯತ್ನವನ್ನು ಎಷ್ಟೇ ಮಾಡಿದರೂ ಅದು ಆಗುವುದು ಅಸಂಭವ. ಸಾಧ್ಯವಾಗುತ್ತದೆಯೇ? ತಂದೆಯನ್ನು ಬಿಡಬಲ್ಲಿರಾ? ನೀವು ಬರಬೇಡಿರೆಂದು ತಂದೆಯು ಹೇಳಿದರೆ ಆಗ ಏನು ಮಾಡುವಿರಿ? (ಬರುವೆವು) ಏಕೆ ಬರುತ್ತೀರಿ? ತಂದೆಯು ಬರಬೇಡಿರೆಂದು ಹೇಳಿದರೂ ಏಕೆ ಬರುತ್ತೀರಿ? ನನಗೆ ಅಧಿಕಾರವಿದೆ ಎಂದು ಹೇಳಿರಿ, ನನ್ನ ಮನೆಯಾಗಿದೆ. ನನ್ನ ತಂದೆಯಾಗಿದ್ದಾರೆ ಎಂದು ಹೇಳಿರಿ. ಆದ್ದರಿಂದ ಅಧಿಕಾರವಿದೆಯೆಂದು ಹೇಳಿರಿ. ಬಾಬಾರವರೂ ಮಿಲನ ಮಾಡುವರೋ ಇಲ್ಲವೋ, ನೋಡುವರೋ, ನೋಡುವುದಿಲ್ಲವೋ ..... ಎಂದು ಯೋಚಿಸುತ್ತೀರೋ. ನೋಡಿಬಿಟ್ಟಿರಲ್ಲವೇ. ಈಗ ಇವರು ಎಲ್ಲಾ ಸಿಂಧೀಯರನ್ನೂ ಎಚ್ಚರಗೊಳಿಸಬೇಕಾಗಿದೆ. ಎಲ್ಲಾ  ಕಡೆಯೂ ಜಾಗ್ರತರಾಗುತ್ತಾ ಇದ್ದಾರೆ. ಎಷ್ಟು ದೊಡ್ಡದಾಗಿ

ಮಾಡಲು ಬಯಸಿದರೂ ಮಾಡಿರಿ. ಎಂತಹ ಸೀಜನ್ನಿನಲ್ಲಿ ಮಾಡಬೇಕೆಂದರೆ, ಎಲ್ಲಾ ಹೋಟೆಲ್ಗಳನ್ನೂ ಮುಂಚಿತವಾಗಿಯೇ ಬುಕ್ ಮಾಡಿಬಿಡಿ. ಯಾವ ಹೋಟೆಲಿನಲ್ಲಿ ಹೋದರೂ ಬ್ರಹ್ಮಾಕುಮಾರಿಯರೇ ಇರಬೇಕು. ಎಚ್ಚರ ಮಾಡುವುದಂತೂ ಎಲ್ಲರನ್ನೂ ಮಾಡಿರಿ ಹಾಗೂ ಭಾರತದಲ್ಲಿ ಜಾಗೃತಗೊಳಿಸುವ ತುಂಬಾ ಒಳ್ಳೊಳ್ಳೆಯ ಪ್ರೋಗ್ರಾಮ್‌ಗಳನ್ನು ವ್ಯವಸ್ಥೆ ಮಾಡಿದ್ದಾರೆ. ಬಾಪ್ ದಾದಾರ ಬಳಿ ಎಲ್ಲಾ ಸಮಾಚಾರವೂ ಬಂದಿದೆ. ಭಾರತವು ಹೈಜಂಪ್ ಮಾಡುತ್ತಾ ಇದೆ. ಏಕೆಂದರೆ ಮೂಲೆ ಮೂಲೆಯಲ್ಲಿ ಸಂದೇಶ ತಲುಪಿಸಬೇಕಾಗಿದೆ ಎಂದು. ಯಾರೂ ವಂಚಿತರಾಗಿ ಉಳಿದುಬಿಡಬಾರದು. ಇದು ತುಂಬಾ ಒಳ್ಳೆಯ ಉದ್ದೇಶವಾಗಿದೆ. ಆಕ್ಷೇಪಣೆಯು ಪೂರ್ಣವಾಗಿ ಬಿಡುವುದು.

ನೋಡಿರಿ, ಇದು ಇಲ್ಲಿಯ ಪದ್ಧತಿಯಾಗಿದೆ. 12 ಘಂಟೆಗೆ ಗಂಟೆ ಬಾರಿಸುತ್ತದೆ. ಬಾಪ್ ದಾದಾರವರು ಮಕ್ಕಳ ಇಚ್ಛೆಯನ್ನು ಗಮನಿಸಬೇಕಾಗುತ್ತದೆ. 11 ಗಂಟೆಗಾದರೂ ಘಂಟೆಯನ್ನು ಬಾರಿಸಿರಿ ಅಥವಾ 12 ಗಂಟೆಗೆ ಬಾರಿಸಿರಿ. ಬ್ರಾಹ್ಮಣರು ಆನಂದೋತ್ಸವ ಆಚರಿಸದಿದ್ದರೆ ಇನ್ನಾರು ಆಚರಿಸುವರು?

**ಯುವ ವರ್ಗದವರೊಂದಿಗೆ :** ಯುವ ವರ್ಗದವರ ರಿಟ್ರೀಟ್ ನಡೆಯುತ್ತಾ ಇದೆ. ದೇಶ-ವಿದೇಶದವರು ಸೇರಿ ಪ್ರೋಗ್ರಾಂ ಆಗುತ್ತಾ ಇದೆಯಾದ್ದರಿಂದ ಶೋಭಿಸುತ್ತದೆ. ಇವರ ಶಿಕ್ಷಕಿಯು ಯಾರಾಗಿದ್ದಾರೆ? ಯುವ ವರ್ಗದವರಿಗೆ ಸೊಗಸೆನಿಸುತ್ತದೆಯೇ? ವಿದ್ಯಾರ್ಥಿಗಳೂ ಸಂತುಷ್ಟರಾಗಿದ್ದಾರೆ ಹಾಗೂ ಶಿಕ್ಷಕಿಯೂ ಸಂತುಷ್ಟಳಾಗಿದ್ದಾಳೆ. ಒಳ್ಳೆಯದು ತುಂಬಾ ಒಳ್ಳೆಯ ಪ್ರೋಗ್ರಾಂ ವ್ಯವಸ್ಥೆ ಮಾಡಿದ್ದೀರಿ. ಪಕ್ಕಾ ಮಾಡಿಕೊಳ್ಳಿರಿ. ಎಲ್ಲರೂ ಸೇರಿ ಏನು ಪ್ರೋಗ್ರಾಂ ಮಾಡಿದ್ದೀರೋ ಅದನ್ನು ಬಾಯಿಯಿಂದ ಹೇಳಿರಿ. (ಎಲ್ಲರೂ ಸೇರಿ ಪ್ರೋಗ್ರಾಂ ಮಾಡಿದೆವು) ತುಂಬಾ ಒಳ್ಳೆಯದು. ಚಪ್ಪಾಳೆ ತಟ್ಟಿರಿ. ಒಳ್ಳೆಯದು, ನೋಡಿರಿ ಹೀಗೆ ದೇಶ-ವಿದೇಶದ ಯುವ ವರ್ಗದವರು ಒಟ್ಟಿಗೆ ಸೇರಿ ಕಮಾಲ್ ಮಾಡಿ ತೋರಿಸಿದರೆ, ಸರ್ಕಾರವು ಏನು ಮಾಡುವುದು? ಯಾವಾಗ ದೇಶ- ವಿದೇಶದವರೆಲ್ಲರೂ ಸೇರಿ ದೃಢ ಸಂಕಲ್ಪ ಮಾಡಿದ್ದೀರೋ ಆಗ ಯುವವರ್ಗದವರ ಸಂಕಲ್ಪದ ಮುಂದೆ ತಾವಾಗಿಯೇ ಶರಣಾಗಿ ಬಿಡುವರು. ಒಳ್ಳೆಯದು. ಯಾವಾಗಲಾದರೂ ಪ್ರೋಗ್ರಾಂ ಮಾಡಿದರೆ ದೇಶ ವಿದೇಶದ ಯುವ ವರ್ಗದವರು ಭಾರತ ಸರ್ಕಾರವನ್ನು ಎಚ್ಚರಗೊಳಿಸುವಿರಿ, ಅವರೂ ಖುಷಿಯಾಗುವರು. ಒಳ್ಳೆಯದು -

**12 ಗಂಟೆಯ ನಂತರ ಅವ್ಯಕ್ತ ಬಾಪ್‌ದಾದಾರವರು ಹೊಸ ವರ್ಷ ಹಾಗೂ ಡೈಮಂಡ್ ಜೂಬ್ಲಿ ವರ್ಷದ ಶುಭಾಶಯಗಳನ್ನು ನೀಡಿದರು.**

ಇಂದಿನ ದಿನ ಡಬಲ್ ಶುಭಾಶಯಗಳು ಸಲ್ಲುತ್ತವೆ. ಒಂದು ಹೊಸ ವರ್ಷದ್ದು ಹಾಗೂ ಇನ್ನೊಂದು ಡೈಮಂಡ್ ಜೂಬ್ಲಿ ವರ್ಷದ್ದು. ಸದಾ ಈ ವರ್ಷವನ್ನು ನಿಮ್ಮ ಎರಡೂ ಸ್ವರೂಪ, ಒಂದು ಡಬಲ್‌ಲೈಟ್ ಸೂಕ್ಷ್ಮ ದೇವತಾ ಸ್ವರೂಪ ಹಾಗೂ ಇನ್ನೊಂದು ಸತ್ಯವಾದ ಡೈಮಂಡ್, ದೋಷರಹಿತವಾದ ಡೈಮಂಡ್, ಅಮೂಲ್ಯ ಡೈಮಂಡ್. ಆದ್ದರಿಂದ ಡೈಮಂಡ್ (ವಜ್ರ) ಆಗಿ ಆನೇಕ ಆತ್ಮರನ್ನು ಡೈಮಂಡ್ ಮಾಡಿರಿ ಇದೇ ಈ ವರ್ಷದ ಲಕ್ಷ್ಮವಾಗಿದೆ ಹಾಗೂ ಬ್ರಾಹ್ಮಣ ಮಕ್ಕಳು ಲಕ್ಷ್ಯ ಹಾಗೂ

ಲಕ್ಷಣವನ್ನು ಜೊತೆ ಜೊತೆಯಲ್ಲಿ ಸಮಾನವನ್ನಾಗಿ ಮಾಡಿ ತೋರಿಸುತ್ತೀರಿ ಎನ್ನುವುದು ಬಾಪ್‌ದಾದಾರಿಗೆ ಗೊತ್ತಿದೆ. ಈ ಡೈಮಂಡ್ ಜೂಬ್ಲೀ ವರ್ಷವು ಅನೇಕ ಆತ್ಮರು ತಂದೆಯ ಸಮೀಪದಲ್ಲಿ ಬರುವ ವರ್ಷವಾಗಿದೆ ಹಾಗೂ ಜೊತೆ ಜೊತೆಯಲ್ಲಿ ಈ ವರ್ಷಕ್ಕೆ ಸಹಜವಾಗಿ ತಂದೆಯ ಜೊತೆಯಲ್ಲಿ ಇರುವುದರಿಂದ ಸಹಜವಾಗಿಯೇ ಪ್ರಾಪ್ತಿಯಾಗುವ ವರ್ಷವಾಗಿದೆ. ಆದ್ದರಿಂದ ನಾಲ್ಕೂ ಕಡೆಯ ಮಕ್ಕಳು ಈ ಸಹಜ ವರದಾನದ ಪೂರ್ತಿ ಪೂರ್ತಿ ಲಾಭವನ್ನು ತೆಗೆದುಕೊಳ್ಳುವಿರಿ ಹಾಗೂ ಅನ್ಯರಿಗೂ ಕೊಡಿಸುವಿರಿ. ಡೈಮಂಡ್ ಗುಡ್‌ನೈಟ್ ಹಾಗೂ ಗುಡ್ ಮಾರ್ನಿಂಗ್ ಎರಡೂ ಆಗಲಿ.

ನಾಲ್ಕೂ ಕಡೆಯ ಮಕ್ಕಳ ತುಂಬಾ ಖುಷಿ ಹಾಗೂ ಉತ್ಸಾಹ-ಉಲ್ಲಾಸದ ಕಾರ್ಡ್‌ಗಳು ಸಿಕ್ಕಿದವು. ಪತ್ರಗಳು ದೊರೆತವು. ಹಾಗೂ ಎಲ್ಲರಿಗೂ ಅದಕ್ಕೆ ಪ್ರತಿಯಾಗಿ ಡಬಲ್ ಪ್ರೀತಿ ಹಾಗೂ ಶುಭಾಶಯಗಳು ಸಲ್ಲುತ್ತವೆ.

**ಹೊಸ ವರ್ಷದಲ್ಲಿ ತಲಹಟಿಯಲ್ಲಿ ದೊಡ್ಡ ಹಾಲ್‌ನ ಫೌಂಡೇಷನ್‌ಅನ್ನು ಹಾಕಬೇಕಾಗಿದೆ.**

ಡೈಮಂಡ್ ಜೂಬ್ಲಿಯಲ್ಲಿ ಸೇವೆ ಮಾಡಿದವರಿಗೆ ಕುಳಿತುಕೊಳ್ಳುವ ಸಲುವಾಗಿ ಸ್ಥಳಾವಕಾಶವನ್ನು ಮಾಡಿಕೊಟ್ಟಿದ್ದೀರೋ ಅಥವಾ ನೀವು ಹೊರಗಡೆ ಕುಳಿತುಕೊಂಡು ಅವರನ್ನು ಒಳಗಡೆ ಕೂಡಿಸುವಿರೋ, ಏನು ಮಾಡುವಿರಿ? ನೀವು ಒಳಗಡೆಯೇ ಕುಳಿತುಕೊಳ್ಳುವಿರಿ, ಹೊರಗಡೆಯಲ್ಲ. ಒಂದುವೇಳೆ ಹೊರಗಡೆ ಮೈಕ್ (ಧ್ವನಿವರ್ಧಕ)ನಲ್ಲಿ ಕೇಳಿಸುತ್ತಿದ್ದರೆ ಒಳಗಡೆ ಕುಳಿತುಕೊಳ್ಳುವಿರಾ? ಹಾಗಾದರೆ ಏನು ಮಾಡಬೇಕು? ಇದೇ ಶುಭ ಸಂಕಲ್ಪದಿಂದ ಈಗ ಕೆಳಗಡೆ ಆದಷ್ಟು ಅಧಿಕ ಸಂಖ್ಯೆಯಲ್ಲಿ ಮಿಲನ ಮಾಡಲು ಸಾಧ್ಯವಾಗುವಂತೆ ಕುಳಿತುಕೊಳ್ಳಲು ಸಾಧ್ಯವಾಗುವಂತೆ, ಪ್ರಥಮ ಹಂತದ ಬುನಾದಿಯನ್ನು (ಫೌಂಡೇಷನ್) ಹಾಕುತ್ತಾ ಇದ್ದೇವೆ. ಎಲ್ಲರೂ ಹಾಕುವಿರಲ್ಲವೇ. ನಾಲ್ಕೂ ಕಡೆಯ ದೇಶ ವಿದೇಶಗಳ ಮಕ್ಕಳ ಕೈಬೆರಳಿನ ಸಹಯೋಗದಿಂದ ಜ್ಞಾನಸರೋವರವು ನಿರ್ಮಾಣವಾಗಿ ಬಿಟ್ಟಿತು. ಇದಂತೂ ಅದರ ಮುಂದೆ ಏನೂ ಅಲ್ಲ. ಅದಂತೂ ಸಹಜವಾಗಿಯೇ ಸರ್ವರ ಸಂಕಲ್ಪ ಹಾಗೂ ಸಹಯೋಗದಿಂದ ಅತಿ ಸಹಜವಾಗಿ ನಿರ್ಮಾಣವಾಗಿಯೇ ಆಗಲಿದೆ. ನಿಮಗೆ ಇಷ್ಟವಿದೆಯೇ? ಇಷ್ಟವಿದೆಯೇ? ಡಬ್ಬಲ್ ವಿದೇಶೀಯರಿಗೆ ಹೆಚ್ಚು ಇಷ್ಟವಾಗುತ್ತದೆಯೋ ಅಥವಾ ಭಾರತೀಯರಿಗೆ ಹೆಚ್ಚು ಇಷ್ಟವಾಗುತ್ತದೆಯೋ? ಇಬ್ಬರಿಗೂ ಇಷ್ಟವಾಗುತ್ತದೆ. ಹಾಗಾದರೆ ಫೌಂಡೇಷನ್ ಹಾಕಿರಿ ಅರ್ಥಾತ್ ಕೈಬೆರಳನ್ನು ಕೊಡಿರಿ. ಬೆಟ್ಟವಂತೂ ಎದ್ದೇಬಿಟ್ಟಿದೆ. ಸರಿಯಾಗಿದೆಯಲ್ಲವೇ? ದೇಶ ಹಾಗೂ ವಿದೇಶದ ಸಂಘಟನೆಯ ಮೇಳವಾಗಿ ಇರುವುದರಿಂದ ದೇಶ ಹಾಗೂ ವಿದೇಶದವರು ಒಂದಾಗಿ ಏನು ಫೌಂಡೇಷನ್ ಹಾಕುವಿರೋ ಅದು ಎಷ್ಟು ಉತ್ತಮವಾಗುವುದು. ಆದ್ದರಿಂದ ಯಾರು ಯಾರು ಇರುವರೋ ಅವರೆಲ್ಲರ ಪರವಾಗಿ ಆ ಭೂಮಿಯ ಮೇಲೆ ಸ್ನೇಹದಿಂದ ಫೌಂಡೇಷನ್ ಹಾಕುವೆವು. ಒಳ್ಳೆಯದು.

ರಿವೈಸ್ ಕೋರ್ಸ್ 31-12-1995.

***ವಜ್ರತುಲ್ಯ ವರ್ಷದಲ್ಲಿ ಫರಿಶ್ತೆಯಾಗಿ ಬಾಪ್‌ದಾದಾರವರ ಛತ್ರಛಾಯೆ ಹಾಗೂ ಪ್ರೀತಿಯ ಅನುಭವವನ್ನು ಮಾಡಿಕೊಳ್ಳಿರಿ.***

ಡೈಮಂಡ್ ವರ್ಷದಲ್ಲಿ ಬಾಪ್‌ದಾದಾ ಇದೇ ವಿಶೇಷತೆಯನ್ನು ನೋಡಲು ಬಯಸುತ್ತಿದ್ದಾರೆ. ಪ್ರತಿಯೊಂದು ಮಗುವನ್ನು ಯಾವಾಗ ನೋಡಿದರೂ ಯಾರು ನೋಡಿದರು ಹೊಳೆಯುತ್ತಿರುವ ವಜ್ರದಂತೆ ಕಾಣಿಸಬೇಕು. ಎದುರುಗಡೆ ಇರುವ ಆತ್ಮ ಕಪ್ಪಾಗಿರುವ ಇದ್ದಿಲಾದರೂ ಅರ್ಥಾತ್ ಎಷ್ಟು ತಮೋಗುಣಿ ಆತ್ಮನನ್ನಾದರು ಆಗಲಿ ನೀವು ಏನು ಮಾಡುತ್ತೀರಿ? ನೀವು ಇದ್ದಿಲನ್ನು ನೋಡುತ್ತೀರಾ ಅಥವಾ ವಜ್ರವನ್ನು ನೋಡುತ್ತೀರಾ? ವಜ್ರವನ್ನೇ ನೋಡಬೇಕು. ವಜ್ರವಾಗಬೇಕು ಮತ್ತು ವಜ್ರದಂತೆ ತಯಾರು ಮಾಡಬೇಕು. ಇದೇ ದಿನವೂ ನೀವು ಆಚರಿಸಿಕೊಳ್ಳುವ ಸಮಾರಂಭವಾಗಿದೆ. ಏನಾದರೂ ಆಗಲಿ ವಜ್ರದಲ್ಲಿ ಕಲೆ ಬೀಳಬಾರದು. ಒಂದು ವೇಳೆ ಯಾವುದಾದರು ವಿಘ್ನಕ್ಕೆ ಅಥವಾ ಸ್ವಭಾವ ಸಂಸ್ಕಾರಕ್ಕೆ ವಶವಾಗಿ ಬಿಟ್ಟಿದ್ದೀರಿ ಎಂದರೆ ಕಲೆ ಬಿದ್ದ ಹಾಗೆಯೇ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮನಂದ ತಂದೆ.

1. ನಾನು ಯಾರೇ ಸಂಬಂಧ ಸಂಪರ್ಕದಲ್ಲಿ ಬಂದರೂ ವಜ್ರವಾಗಿ ತಯಾರಾಗಿ, ವಜ್ರವನ್ನೇ ನೋಡಿ ನನ್ನ ದೃಷ್ಟಿಯಿಂದ ಅವರನ್ನು ಕೂಡ ವಜ್ರದಂತೆ ತಯಾರು ಮಾಡಿ ಪ್ರತಿದಿನ ಸಮಾರಂಭವನ್ನು ಆಚರಿಸಿಕೊಂಡಿದೇನೆ.

2. ನಾನು ಪ್ರಕೃತಿಯಿಂದ, ಆತ್ಮರಿಂದ, ಅನೇಕ ವಿಧವಾದ ಪರಿಸ್ಥಿತಿಗಳಿಂದ ಬರುವ ವಿಘ್ನವನ್ನು ವಿನಾಶ ಮಾಡುವ ಶಕ್ತಿಶಾಲಿ ವಜ್ರವಾಗಿದ್ದೇನೆ.

3. ನಾನು ಫರಿಶ್ತಾ ಸ್ವರೂಪದಲ್ಲಿದ್ದು ಪ್ರತಿಯೊಂದು ಕರ್ಮವನ್ನು ಮಾಡಿ ಶಿವ ತಂದೆ ಮತ್ತು ಬ್ರಹ್ಮಾ ತಂದೆಯ ಮೇಲೆ ಇರುವ ಪ್ರೀತಿಯ ಪ್ರಮಾಣವನ್ನು ತೋರಿಸಿದ್ದೇನೆ.

4. ನಾನು ನನ್ನ ಸಂಕಲ್ಪ, ವೃತ್ತಿ, ದೃಷ್ಟಿ ಎಲ್ಲವನ್ನು ಡಬಲ್ ಲೈಟ್‌ಆಗಿ ಮಾಡಿಕೊಂಡು ನಡೆದಾಡುತ್ತಾ, ತಿರುಗಾಡುತ್ತಾ ಫರಿಶ್ತಾ ಸ್ವರೂಪದಲ್ಲಿ ಇದ್ದು ಬ್ರಹ್ಮಾ ತಂದೆಗೆ ಇಷ್ಟವಾದ ಉಡುಗರೆಯನ್ನು ಕೊಟ್ಟಿದ್ದೇನೆ.

5. ಎಂತಹ ಪರಿಸ್ಥಿತಿ ಅಥವಾ ವಿಘ್ನ ಬಂದರೂ ನಾನು ತಂದೆಯಯನ್ನು ಛತ್ರ ಛಾಯೆಯನ್ನಾಗಿ ಮಾಡಿಕೊಂಡಿರುವ ಫರಿಶ್ತಾ ಸ್ವರೂಪ.

6. ನಾನು ಫರಿಶ್ತೆಯಾಗಿ, ಫರಿಶ್ತಾ ರೂಪದಲ್ಲಿಯೇ ನಡೆದಾಡುತ್ತಾ, ತಿರುಗಾಡುತ್ತಾ ಇರುವ ವಜ್ರ.

7. ನಾನು ಸತ್ಯವಾದ ವಜ್ರವಾಗಿ ಫರಿಶ್ತೆಯಾಗಿ ತಯಾರಾದ ಕಾರಣ ನನ್ನ ಸ್ವರೂಪದಿಂದ ಅಷ್ಟಶಕ್ತಿಗಳ ಕಿರಣಗಳು ಎಲ್ಲರಿಗೂ ಅನುಭವವಾಗಿವೆ. (ಕೆಲವರಿಗೆ ಸಹನ ಶಕ್ತಿ, ಕೆಲವರಿಗೆ ನಿರ್ಣಯ ಶಕ್ತಿ, ಇನ್ನೂ ಕೆಲವರಿಗೆ ಇನ್ನೊಂದು ಶಕ್ತಿ, ಹೀಗೆ ಒಬ್ಬೊಬ್ಬರಿಗೆ ಒಂದೊಂದು ಶಕ್ತಿಯ ಅನುಭವವಾಗುತ್ತದೆ.)

8. ಆತ್ಮರು ಎಷ್ಟು ಎದುರಿಸಿದರು ಸಮಾವೇಶಗೊಳಿಸುವ ಶಕ್ತಿಯಿಂದ ಸಮಾವೇಶಗೊಳಿಸಿಕೊಂಡು ನಿಶ್ಚಯದಿಂದ ವಿಜಯವನ್ನು ಪಡೆದಿದ್ದೇನೆ.

9. ನಾನು ದೃಢಸಂಕಲ್ಪ ಮತ್ತು ಸಂಪೂರ್ಣ ನಿಶ್ಚಯದಿಂದ ಲೋಪದೋಷಗಳು (ಬಲಹೀನತೆಗಳಿಗೆ) ಬೀಳ್ಕೊಡುಗೆಯನ್ನು ಕೊಟ್ಟಿದ್ದೇನೆ.

10. ನಾನು ಯಾವ ಕಾರ್ಯ ಮಾಡುತ್ತಿದ್ದರೂ ನಿರಂತರ ಆತ್ಮಭಿಮಾನಿ ಸ್ಥಿತಿಯಲ್ಲಿ ಮಾಡಿ ನನ್ನ ಜಮಾ ಖಾತೆಯನ್ನು ಸತ್ಯಯುಗದಲ್ಲಿ ಅರ್ಥಾತ್ ಸೂರ್ಯವಂಶದಲ್ಲಿ ಬರುವಂತೆ ಬೆಳೆಸಿಕೊಂಡಿದ್ದೇನೆ.

11. ನಾನು ಅನ್ಯರನ್ನು ನೋಡುವ ಅಲೆ, ಸೋಮಾರಿತನದ ಅಲೆಗೆ ಬೀಳ್ಕೊಡುಗೆಯನ್ನು ಕೊಟ್ಟು ಸದಾ ಉತ್ಸಾಹ ಉಲ್ಲಾಸಗಳಲ್ಲಿ ಇರುತ್ತಾ ತಂದೆಗೆ ಉಡುಗೊರೆಯನ್ನು ಕೊಡುವುದರಲ್ಲಿ ಮೊದಲ ನಂಬರನ್ನು ಪಡೆದಿದ್ದೇನೆ.